ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 27 ಸಂಚಿಕೆ 47 ನವೆಂಬರ್ 20, 2005 ಬೆಲೆ ರೂ. 3.00



ಬದುಕಲು ಯೋಗ್ಯವಾದ ವೇತನ - ಖಾಯಮಾತಿಗಾಗಿ

ಅಂಗನವಾಡಿ ನೌಕರರ 5ನೇ ಅ.ಭಾ. ಸಮ್ಮೇಳನದ ಆಗ್ರಹ



ಗೋ ಯಾತ್ರೆಯ ಹಿಂದೆ ಗುಪ್ತ ಅಜೆಂಡಾ

ಇರಾಕ್ ಜನತೆಯ ರಕ್ಷಣೆ ಅಪರಾಧವಲ್ಲ



ಚಿಂದಿಯಾಗಿರುವ ನೇಕಾರರ ಬದುಕು

- ಮಹಿಳಾ ಮೀಸಲಾತಿಗಾಗಿ ಚಳುವಳಿ
- ಅಮೇರಿಕಾ-ಭಾರತ ಜಂಟಿ ಕವಾಯತಿಗೆ ಕಪ್ಪು ಬಾವುಟ


ಸಾವಿನೂರಿಗೆ ಸಾಗಿದ ಕಾಂ. ಮುಲ್ಲಾ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ

ಇತ್ತೀಚೆಗೆ ಅನಿರೀಕ್ಷಿತವಾಗಿ ಹೃದಯಾಘಾತದಿಂದ ಮೃತರಾದ ಗದಗ ಜಿಲ್ಲೆಯ ಸಿಪಿಐ(ಎಂ) ಪಕ್ಷದ ಮುಖಂಡ, ಯುವ ನೇತಾರ ಕಾಂ. ಅಬ್ದುಲ್ ರಜಾಕ್ ಮುಲ್ಲಾರವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಸಭೆಯನ್ನು ಗದಗದಲ್ಲಿ ಸಂಘಟಿಸಲಾಗಿತ್ತು. ಈ ಪ್ರದೇಶದ ಪ್ರಜಾಸತ್ತಾತ್ಮಕ ಚಳುವಳಿಗೆ ಕಾಂ. ಮುಲ್ಲಾ ನೀಡಿದ ಕೊಡುಗೆಯನ್ನು ಸ್ಮರಿಸಿದ ಈ ಸಭೆಯಲ್ಲಿ ಕಾಂ. ಮುಲ್ಲಾರವರ ಕುಟುಂಬ ಭದ್ರತೆಗಾಗಿ ನಿಧಿ ಸಂಗ್ರಹಿಸಲು ಸಹ ತೀರ್ಮಾನಿಸಲಾಗಿದೆ.

ಅಕ್ಟೋಬರ್ 17 ರಂದು ನಿಧನರಾದ ಯುವ ಕ್ರಾಂತಿಕಾರಿ ಹೋರಾಟಗಾರ ಕಾಮ್ರೇಡ್ ಅಬ್ದುಲ್ ರಜಾಕ್ ಮುಲ್ಲಾರವರಿಗೆ ಭಾವಪೂರ್ಣ ಶ್ರದ್ಧಾಂಜಲಿಯೊಂದಿಗೆ ಕೆಂಪು ವಂದನೆಗಳನ್ನು ಸಲ್ಲಿಸುವ ಸಭೆಯು 30.10.2005 ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಗದಗದ ತೋಂಟದ ಸಿದ್ದಲಿಂಗೇಶ್ವರ ಕಲ್ಯಾಣ ಕೇಂದ್ರದ ಸಭಾಂಗಣದಲ್ಲಿ ನಡೆಯಿತು.

ಅಸಮಾನತೆಯು ಮಡುಗಟ್ಟಿದ ವ್ಯವಸ್ಥೆಯಲ್ಲಿ ಅನ್ಯಾಯ, ಶೋಷಣೆ ಮುಂತಾದ ಅಮಾನವೀಯ ಮೌಲ್ಯಗಳ ವಿರುದ್ಧ ಎದೆ ಸೆಟೆಸಿ ನಿಂತು ಹೋರಾಟದಲ್ಲಿ ತೊಡಗಿಸಿಕೊಂಡ, ಕೋಮುವಾದದ ವಿರುದ್ಧ ಸೌಹಾರ್ದತೆಯನ್ನು ಬಿತ್ತುವಲ್ಲಿ ಕೈಜೋಡಿಸಿದ ಕಾಮ್ರೇಡ್ ಮುಲ್ಲಾ 35ನೇ ವಯಸ್ಸಿನಲ್ಲಿ ನಿಧನರಾದರೂ ಅವರು ಇಟ್ಟ ಚಳುವಳಿಯ ಹೆಜ್ಜೆಗಳು ಯುವ ಹೋರಾಟಗಾರರಿಗೆ ಆದರ್ಶವಾಗಲಿ ಎಂದು ಡಿವೈಎಫ್ಐ ನ ರವೀಂದ್ರ ಹೊನವಾಡ ಪ್ರಾಸ್ತಾವಿಕ ಮಾತುಗಳಲ್ಲಿ ತಿಳಿಸಿದರು.

ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ ಜಿ.ಎನ್.ನಾಗರಾಜ್‌ರವರು ಮಾತನಾಡಿ ಚಳುವಳಿಯನ್ನು ಕಟ್ಟಿ ಬೆಳೆಸುವಲ್ಲಿ ಮುಲ್ಲಾರವರ ಕೊಡುಗೆ, ಅವರು ಮೈಗೂಡಿಸಿಕೊಂಡಿದ್ದ ಮಾನವೀಯ ಮೌಲ್ಯಗಳನ್ನು ಮೆಲಕು ಹಾಕಿದರು. ಪಾಳೆಗಾರಿ ಧಣಿಗಳ ಆರ್ಭಟದ ಅಡಿಯಲ್ಲಿ ಸಿಲುಕಿಕೊಂಡ ಜನತೆಯನ್ನು ಬಂಧಮುಕ್ತಗೊಳಿಸಲು, ಬದುಕಿನ ಕಠಿಣ ಕ್ಷಣಗಳನ್ನು ಎದುರಿಸಲು ಕಠಿಬದ್ಧರಾದ ಅವರ ಪ್ರಯತ್ನ ಇತರರಿಗೂ ಮಾದರಿಯಾಗಲಿ. ಹಳ್ಳಿಯಲ್ಲಿ ಬೇರೂರಿ ಬೆಳೆದು ಕತ್ತಲೆಯತ್ತ ಮುಖಮಾಡಿ ನಿಂತು ಬೆಳಕಿನ ಕಿಡಿಯನ್ನು ಹೊತ್ತಿಸಿ ಮುಲ್ಲಾ ಒಂದು ಸಣ್ಣ ಸೊಡರಾದರೂ ಅನೇಕ ದೀಪಗಳನ್ನು ಅದು ಹಚ್ಚಿ ಬೆಳಗಿಸಿದೆ ಎಂದು ಬಾವಪೂರಿತವಾಗಿ ನುಡಿದರು.



ಕಾಮ್ರೇಡ್ ಅಬ್ದುಲ್ ರಜಾಕ್ ಮುಲ್ಲಾ
01.06.1967 - 17.10.2005

ಸಾಧಿಸುವ ಛಲ, ಕರ್ತವ್ಯ ಪ್ರಜ್ಞೆ, ಸಲಹೆಗಳನ್ನು ಸ್ವೀಕರಿಸುವ ಪ್ರವೃತ್ತಿ ಮುಲ್ಲಾರವರು ಹೋರಾಟದಲ್ಲಿ ಈ ಮಟ್ಟಕ್ಕೆ ಬೆಳೆಯಲು ಸಹಾಯವಾಯಿತು. ಸವಾಲುಗಳನ್ನು ಸ್ವೀಕರಿಸುವುದು ಅವರ ಒಂದು ಧ್ಯೇಯವಾಗಿತ್ತು. ಜನರ ಮೇಲೆ ದೌರ್ಜನ್ಯ ಎಸಗುವ ವ್ಯಕ್ತಿಗಳ ವಿರುದ್ಧ ಸಣ್ಣ ಪ್ರಾಯದಿಂದಲೇ ಹೋರಾಟ ಆರಂಭಿಸಿದರು. ಬೆಳವಣಿಕೆ ಗ್ರಾಮವನ್ನು ಸಾಮಾಜಿಕ ಚಳುವಳಿಯ ಕೇಂದ್ರವನ್ನಾಗಿ ರೂಪಿಸುವ ನಿಟ್ಟಿನಲ್ಲಿ ಅವರ ಪ್ರಯತ್ನ ಶ್ಲಾಘನೀಯ. ಸಂಗಾತಿಗಳನ್ನು ಕ್ರಾಂತಿಕಾರಿ ಸ್ವಪ್ನನೆಯ ನೀರೆರೆದು ಪೋಷಿಸಿದರು. ಸ್ವತಃ ತಾವೇ ಹೋರಾಟವನ್ನು ಹುಡುಕಿಕೊಂಡು ಬಂದು ಇತರ ಯುವಕರಿಗೆ ಮಾದರಿಯಾದರು ಎಂದು ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷ ನಿತ್ಯಾನಂದಸ್ವಾಮಿಯವರು ಅಗಲಿದ ಸಂಗಾತಿಗೆ ಶ್ರದ್ಧಾಂಜಲಿ ಅರ್ಪಿಸಿದರು.

ಜಿಲ್ಲೆಯ ಹಾಗೂ ರಾಜ್ಯದ ಪ್ರಜಾಸತ್ತಾತ್ಮಕ ಹೋರಾಟಗಳಲ್ಲಿ ಅಬ್ದುಲ್ ರಜಾಕ್ ಮುಲ್ಲಾರವರ ಕೊಡುಗೆ ಸ್ಮರಿಸಿಕೊಂಡು ಡಿವೈಎಫ್ಐ ನ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ, ರಾಜ್ಯಾಧ್ಯಕ್ಷ ಕೆ.ಎನ್.ಉಮೇಶ್, ದಸಂಸ ದ ವೆಂಕಟೇಶಯ್ಯ.ಎಸ್.ಎನ್. ಬಳ್ಳಾರಿ, ಅಕ್ಷರ ದಾಸೋಹ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷೆ ಡಿ.ಪಿ.ಸ್ವರ್ಣಲತಾ, ಕಿಮ್ಸ್ ವೈದ್ಯಾಧಿಕಾರಿ ಕೆ.ರಂಗಪ್ಪ, ಎಸ್ಎಫ್ಐನ ರಾಜ್ಯಾಧ್ಯಕ್ಷ ಬಿ.ರಾಜಶೇಖರಮೂರ್ತಿ, ಗ್ರಾ.ಪಂ. ನೌಕರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಬಿ.ನಾಡಗೌಡ, ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ರಾಜ್ಯ ಉಪಾಧ್ಯಕ್ಷ ಎಸ್.ಎಸ್.ಹದ್ಲಿ, ಭಾರತ ಜ್ಞಾನ ವಿಜ್ಞಾನ ಸಮಿತಿಯ ರಾಜ್ಯ ಕಾರ್ಯದರ್ಶಿ ಈ.ಬಸವರಾಜು, ಕ.ವಿ.ಕಾ. ಶಿಕ್ಷಕರ ಸಂಘಟನೆ ಅಧ್ಯಕ್ಷ ಪ್ರೊ. ಲಿಂಗರಾಜ ಅಂಗಡಿ, ಜಾತ್ಯತೀತ ಜನತಾದಳದ ಅಂದಾನಯ್ಯ ಕುರ್ತಕೋಟಿಮಠ, ದ್ಯಾಮಣ್ಣ ಸವದತ್ತಿ,ಸಿಪಿಎಂ ಜಿಲ್ಲಾ ನಾಯಕ ಬಿ.ಎಸ್.ಸೊಪ್ಪಿನ, ಕೆ.ಎಲ್.ಭಟ್, ಉಪನ್ಯಾಸಕರಾದ ಪ್ರೊ. ಬಿ.ಎ. ಕೆಂಚರಡ್ಡಿ, ಕೂಲಿಕಾರರ ಮುಖಂಡ ಫಕೀರಪ್ಪ ಹೊತನಹಳ್ಳಿ, ಸಿಐಟಿಯು ಮುಖಂಡ ಗೈಬು ಜೈನೆಖಾನ್, ಎಐಎಸ್ಎಫ್ ರಾಜ್ಯ ಕಾರ್ಯಾಧ್ಯಕ್ಷ ಮಹೇಶಕುಮಾರ ರಾಠೋಡ, ಬೆಳವಣಿಕೆ ಗ್ರಾ.ಪಂ. ಸದಸ್ಯ ಬಸರಾಜ ಮಂತೂರ ತಮ್ಮ ನುಡಿನಮನ ಸಲ್ಲಿಸಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಆರ್.ಎಚ್.ಆಯಿ ಅವರು ವಿದ್ಯಾರ್ಥಿಯುವಜನರ ನಡುವೆ, ಅಸಂಘಟಿತ ವಲಯದ ಕಾರ್ಮಿಕರ ನಡುವೆ ಅತ್ಯಂತ ಪ್ರಾಮಾಣಿಕವಾಗಿ ಆರಂಭಿಸಿದ ಕೆಲಸವನ್ನು ಮುನ್ನಡೆಸುವುದೇ ನಾವು ಅವರಿಗೆ ಸಲ್ಲಿಸುವ ನಿಜವಾದ ಶ್ರದ್ಧಾಂಜಲಿ ಎಂದರು. ಮುಲ್ಲಾರವರ ತಾಯಿ ಜನ್ನತ್ ಬಿ, ಹೆಂಡತಿ ಜೈತುನಬಿ, ಮಕ್ಕಳಾದ ರೇಷ್ಮಾ ಸಮತಾ ವೇದಿಕೆಯಲ್ಲಿದ್ದರು.

ಕಾರ್ಯಕ್ರಮದಲ್ಲಿ ದಲಿತ ಸಂಘಟನೆ, ವಿಮಾ, ಬ್ಯಾಂಕ್ ನೌಕರರು, ರಾಜ್ಯ ಸರ್ಕಾರಿ ನೌಕರರು, ಅಕ್ಷರ ದಾಸೋಹ, ಗ್ರಾಮ ಪಂಚಾಯತಿ, ಪ್ರಾಂತ ರೈತ ಸಂಘಟನೆ, ಸಾಕ್ಷರತಾ ಪ್ರೇರಕರು, ಕೃಪಾಂಕ ನೌಕರರು, ಕೂಲಿಕಾರ ಸಂಘಟನೆ, ನಿರುದ್ಯೋಗಿ ಶಿಕ್ಷಕರ ಸಂಘಟನೆ, ಬಿಜಿವಿಎಸ್, ಬಂಡಾಯ ಸಾಹಿತ್ಯ ಸಂಘಟನೆ, ಜನತಾದಳ, ಕಾಂಗ್ರೆಸ್ ಪಕ್ಷಗಳ ಮುಖಂಡರು ಸೇರಿದಂತೆ ನೂರಾರು ಸದಸ್ಯರು ಭಾಗವಹಿಸಿ ಮುಲ್ಲಾರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ಅಲ್ಲದೆ ಕಲಾವಿದ ಶಂಕ್ರಣ್ಣಸಂಕಣ್ಣವರ ಅವರು ಕಾಮ್ರೇಡ್ ಮುಲ್ಲಾ ಅವರ ಹೋರಾಟದ ಬದುಕು ಕುರಿತು ಸ್ಥಳದಲ್ಲಿಯೇ ಹಾಡಿದ ಹಾಡು ಅಲ್ಲಿ ನೆರೆದವರೆಲ್ಲರನ್ನು ಭಾವಾವೇಶಕ್ಕೊಳಪಡಿಸಿ ಕಣ್ಣುಗಳನ್ನು ತೇವಗೊಳಿಸಿತು.

○

ವರದಿ : ಆರ್.ಎಸ್.ಬಳೂಟಗಿ
ಪಿ.ಎನ್.ಪಾಟೀಲ

ಕಾಮ್ರೇಡ್ ಮುಲ್ಲಾ ಅವರ ಕುಟುಂಬದ ಸಹಾಯಾರ್ಥ ನಿಧಿ ಸಂಗ್ರಹ ಸಮಿತಿ


ಕಾಮ್ರೆಡ್ ಮುಲ್ಲಾ ಅವರು ಸಮಾಜದ ಕ್ರಾಂತಿಕಾರಿ ಪರಿವರ್ತನೆಗೆ ಹೋರಾಡಲು ತಮ್ಮ ಬದುಕನ್ನೇ ಸಮರ್ಪಿಸಿದ ಪೂರ್ಣಕಾಲದ ಕಾರ್ಯಕರ್ತರಾಗಿದ್ದರು. ಅಪಾರ ಭರವಸೆಗಳನ್ನು ಹುಟ್ಟಿಸಿ ನಮ್ಮ ನಡುವೆಯಿಂದ ಕಣ್ಮರೆಯಾದ ಅವರು ಬಿಟ್ಟುಹೋಗಿರುವ ಅವರ ಪುಟ್ಟ ಕುಟುಂಬದ ಸಹಾಯಾರ್ಥ ನಿಧಿಯೊಂದನ್ನು ಸಂಗ್ರಹ ಮಾಡಲು ನಿರ್ಧರಿಸಿದ ಸಭೆಯು ಅದಕ್ಕಾಗಿ ವಿವಿಧ ಸಂಘಟನೆಗಳ ಮುಖಂಡರುಗಳನ್ನು ಒಳಗೊಂಡ ಸಮಿತಿಯನ್ನುಸ ರಚಿಸಿತು. ಹಣ ನೀಡಬಯಸುವವರು ಆಯಾ ಸಂಘಟನೆಯಿಂದ ಅಧಿಕೃತ ರಶೀದಿಗಳನ್ನು ಪಡೆಯಬೇಕು. ಹಣ ನೀಡಿದವರ ಹೆಸರುಗಳನ್ನು 'ಐಕ್ಯರಂಗ' ವಾರಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಅವಧಿ ಎರಡು ತಿಂಗಳು ಮಾತ್ರ.

ಸಮಿತಿಯ ಸಂಚಾಲಕರು : 1. ಕೆ.ಎನ್.ಉಮೇಶ್, ಅಧ್ಯಕ್ಷರು, ಡಿವೈಎಫ್ಐ ಕರ್ನಾಟಕ ರಾಜ್ಯ ಸಮಿತಿ, ಬೆಂಗಳೂರು.

2. ಎಂ.ಬಿ.ನಾಡಗೌಡ, ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಗ್ರಾಮ ಪಂಚಾಯತ್ ನೌಕರರ ಸಂಘ, ಬೆಂಗಳೂರು.

ಸದಸ್ಯರು: ನಿತ್ಯಾನಂದಸ್ವಾಮಿ, ಎಸ್.ವರಲಕ್ಷ್ಮಿ, ವಿ.ಪಿ.ಕುಲಕರ್ಣಿ, ಆರ್.ಎಚ್.ಆಯಿ, ಕೆ.ಮಹಾಂತೇಶ, ಬಿ.ರಾಜಶೇಖರಮೂರ್ತಿ, ನವೀನ್ ಕುಮಾರ್, ಪ್ರೊ. ಎಲ್.ಆರ್.ಅಂಗಡಿ, ಪ್ರೊ. ಬಿ.ಎ.ಕೆಂಚರೆಡ್ಡಿ, ಎಸ್.ಎಸ್.ಹದ್ಲಿ, ಈ.ಬಸವರಾಜ, ಎಫ್.ಸಿ.ಚೇಗರೆಡ್ಡಿ, ರವೀಂದ್ರ ಹೊನವಾಡ

ನಾರಾಯಣನ್ ನಿಧನಕ್ಕೆ ಸಂತಾಪ



ಮಾಜಿ ರಾಷ್ಟ್ರಪತಿ, ಅನುಭವೀ ರಾಜತಂತ್ರಜ್ಞ ಕೆ.ಆರ್.ನಾರಾಯಣನ್ ಅವರ ನಿಧನಕ್ಕೆ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ತೀವ್ರ ಸಂತಾಪವನ್ನು ವ್ಯಕ್ತಪಡಿಸಿದೆ.

ಬಡ ದಲಿತ ಕುಟುಂಬದಲ್ಲಿ ಜನಿಸಿದ ನಾರಾಯಣನ್ ಅವರು ಕಠಿಣ ಪರಿಶ್ರಮದಿಂದ ಉನ್ನತ ಸ್ಥಾನಕ್ಕೇರಿದವರು. ಜಾತಿ ದಮನವನ್ನು ಹಿಮ್ಮೆಟ್ಟಿ ಉತ್ತಮ ಶೈಕ್ಷಣಿಕ ಸ್ಥಾನವನ್ನು ಗಳಿಸಿದರು.

ತಮ್ಮ ಯಶಸ್ವಿ ರಾಜತಾಂತ್ರಿಕ ಹುದ್ದೆಯ ನಂತರ ರಾಜಕಾರಣ ಪ್ರವೇಶಿಸಿದ ಅವರು ಕೇಂದ್ರ ಸರ್ಕಾರದ ಸಚಿವರಾಗಿಯೂ ಸೇವೆ ಸಲ್ಲಿಸಿದರು ಎಂದು ಪೊಲಿಟ್‌ಬ್ಯೂರೋ ಪ್ರಶಂಸಿಸಿದೆ.

ಜಾತ್ಯತೀತ ಧೋರಣೆಗೆ ಅವರು ಕಟಿ ಬದ್ಧರಾಗಿದ್ದರು. ಗುಜರಾತ್‌ನಲ್ಲಿ ಸಂಭವಿಸಿದ ಕೋಮು ಹತ್ಯಾಕಾಂಡದಿಂದ ಅವರು ತಳಮಳಗೊಂಡಿದ್ದರು. ಜಾತ್ಯತೀತ ಒಕ್ಕೂಟಕ್ಕೆ ಈ ಹತ್ಯಾಕಾಂಡ ಕಪ್ಪುಚುಕ್ಕೆಯನ್ನಿಸಿತು.

ಕೆ.ಆರ್.ನಾರಾಯಣನ್ ಅವರ ಸಾರ್ವಜನಿಕ ಸೇವೆಯನ್ನು ಭಾರತ ದೇಶ ಸದಾ ಸ್ಮರಿಸುತ್ತದೆ ಎಂದು ಪಕ್ಷ ಅವರ ನಿಧನಕ್ಕೆ ಆಳ ವೇದನೆ ವ್ಯಕ್ತಪಡಿಸಿದೆ ಮತ್ತು ಶ್ರೀಮತಿ ಉಮಾ ನಾರಾಯಣನ್ ಮತ್ತು ಅವರ ಕುಟುಂಬಕ್ಕೆ ಸಾಂತ್ವನ ಹೇಳಿದೆ.

ಗೋಯಾತ್ರೆ ಹಿಂದೆ ಗುಪ್ತ ಅಜೆಂಡಾ!

ಈಗ ಸಂಘರ್ಷ ಯಾತ್ರೆ. ಈಗ ಗೋ ಯಾತ್ರೆ! ಸಂಘಟಿಸುತ್ತಿರುವ ಸಂಸ್ಥೆಗಳ ಹೆಸರು ಬೇರೆ ಬೇರೆ. ಆದರೆ ಮೂಲಬೇರು ಒಂದೇ. ಅದು ಬಿಜೆಪಿ, ಇದು ರಾಮಚಂದ್ರಪುರದ ಮಠ!

ಭಾರತೀಯ ಗೋಮಾತೆಯ ರಕ್ಷಣೆ ಹಾಗೂ ಸಂವರ್ಧನೆಗಾಗಿ ಜನಜಾಗೃತಿ ಮಾಡಲೆಂದೇ ರಾಜ್ಯದಾದ್ಯಂತ 68 ದಿನಗಳು ಈ ಯಾತ್ರೆ ನಡೆಸಲಾಗುತ್ತಿದೆಯೆಂದು ಹೇಳಲಾಗಿದೆ. ನವೆಂಬರ್ 6 ರಂದು ಬೆಂಗಳೂರಿನಲ್ಲಿ ಉದ್ಘಾಟನೆಯಾಗಿದ್ದು, 8 ಜನವರಿ 2006 ರಂದು ಅಂತ್ಯವಾಗಲಿದೆ. ಗೋವುಗಳ ತಳಿಗಳು ಕಣ್ಮರೆಯಾಗುತ್ತಿವೆ, ನಶಿಸುತ್ತಿವೆ ಅವಗಳನ್ನು ಉಳಿಸಬೇಕೆಂಬುದು ಘೋಷಿತ ಉದ್ದೇಶ. ಭಾರತೀಯ ಹಸುವಿನಲ್ಲಿ ಹಲವಾರು ಔಷಧಿಗಳ ಗುಣಗಳಿವೆ. ಮೇಲಾಗಿ ಮೂವತ್ತಮೂರು ಕೋಟಿ ದೇವರುಗಳ ತವರು ಈ ಗೋಮಾತೆ! ಇಂತಹ ಮಾತೆಯನ್ನು ರಕ್ಷಿಸದಿದ್ದರೆ ಹೇಗೆ? ಎಂಬ ಧಾರ್ಮಿಕ ಲೇಪದ ಮಾತುಗಳು....

'ತಳಿ'ಗಳನ್ನು ಸಂರಕ್ಷಿಸಬೇಕೆನ್ನುವ ಮಾತುಗಳಿಗೆ ಅಷ್ಟಾಗಿ ವಿರೋಧವಿರಲಾರದು. ಅದು ಔಷಧಿಗಳ ಗುಣಹೊಂದಿದೆ ಎಂಬುದರ ಬಗ್ಗೆ ಪರಿಶೀಲಿಸಬಹುದು. ಆದರೆ ಇದು ಇಷ್ಟಕ್ಕೆ ನಿಲ್ಲುವುದಿಲ್ಲ. ಗೋವುಗಳ ನಾಶವಾದರೆ ಮನುಕುಲಕ್ಕೆ ಕಂಟಕ! ಗೋಮಾತೆಯ ಮಾರಾಟ ಸಲ್ಲದು, ಗೋವಿನ ಚರ್ಮದ ವಸ್ತುಗಳನ್ನು ಖರೀದಿಸಬಾರದು, ಬಳಸಬಾರದು ಎಂಬುದು ಯಾತ್ರೆ ನಡೆಸುವವರ ಒತ್ತಾಯ. ಬೆಂಗಳೂರಿನಲ್ಲಿ ಯಾತ್ರೆ ಉದ್ಘಾಟನೆಗೊಂಡಾಗ ತಳಿ ಸಂರಕ್ಷಣೆಯಿಂದ ಗೋಹತ್ಯೆಯವರೆಗೆ ಗೋ ಹತ್ಯೆ ಮಾಡುವವರು, ತಿನ್ನುವವರು ಮುಸ್ಲಿಮರು ಎಂಬುವವರೆಗೆ ವಾದ ವಿಸ್ತರಿಸಲಾಗಿದೆ. ಇಲ್ಲಿಯೇ ಇದರ ಅಸಲಿ ಉದ್ದೇಶ ಸ್ಪಷ್ಟವಾಗುವುದು. ಇದು ಯಾರ ವಿರುದ್ಧವೂ ಅಲ್ಲ ಎಂದು ಬೇರೆ ಹೇಳಲಾಗಿರುವುದು ಇಂದಿನ ವಾತಾವರಣದಲ್ಲಿ ಅರ್ಥವಾಗುವುದು ಕಷ್ಟವೇನಲ್ಲ. ನಿವೃತ್ತ ನ್ಯಾಯಮೂರ್ತಿ ರಾಮಜೋಯಿಸ್ ಈ ಯಾತ್ರೆಗೆ ಒಂದು ರಾಜಕೀಯ ದಿಕ್ಸೂಚಿಯನ್ನು ನೀಡಿದ್ದಾರೆ. 1948 ರಲ್ಲಿ ಮುಸ್ಲಿಮರು ಒಪ್ಪಿದರು. 1958 ರಲ್ಲಿ ಗೋವಾಣಿಜ್ಯ ವ್ಯಾಪಾರಗಾರರು ಸುಪ್ರೀಂಕೋರ್ಟ್‌ಗೆ ಹೋದರು. ಸಂಪೂರ್ಣ ಗೋ ಹತ್ಯೆ ಸಾಧ್ಯವಿಲ್ಲವೆಂದಿತು ನ್ಯಾಯಾಲಯ. ಈಗದು 'ವೋಟಿನ ರಾಜಕಾರಣದ ವಸ್ತುವಾಗಿದೆ' ಎನ್ನುವ ಅವರ ವಿಶ್ಲೇಷಣೆ ಈ ಯಾತ್ರೆಯ ಆದಿ ಅಂತ್ಯಗಳನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಇದಕ್ಕೆ ನಯವಾದ ಗಿಲೀಟು ನೀಡಿದವರು ಸನ್ಯಾಸಿ ರಾಜಕಾರಣಿ ಪೇಜಾವರ ಮಠಾಧೀಶರು. ರಾಷ್ಟ್ರಪ್ರಾಣಿ ಹುಲಿಯ ಬದಲು ಗೋವನ್ನು ಮಾಡಬೇಕು ಎಂದು ಪರ್ಯಾಯ ಬೇಡಿಕೆಯನ್ನು ಮಂಡಿಸಿದ್ದಾರಲ್ಲದೆ ಕಳೆದುಕೊಂಡ ಮಾನವೀಯತೆ ಬಗ್ಗೆಯೂ ಮಾತನಾಡಿದ್ದಾರೆ.

ಮುಖ್ಯಪ್ರಶ್ನೆಯೆಂದರೆ ಈ ಯಾತ್ರೆಗೆ ಕೇವಲ ಗೋವು ರಕ್ಷಣೆಯ ಅಜೆಂಡಾ ಮಾತ್ರವಿದೆಯೇ? ಕರ್ನಾಟಕದ ಕರಾವಳಿ ಜಿಲ್ಲೆಗಳಾದ ಉ.ಕನ್ನಡ, ಮುಖ್ಯವಾಗಿ ಉಡುಪಿ-ದ.ಕನ್ನಡ ಹಾಗೂ ಕೊಡಗು ಜಿಲ್ಲೆಗಳಲ್ಲಿ ಇದೇ ಸಂಘ ಪರಿವಾರ ಬಜರಂಗದಳ-ವಿಶ್ವಹಿಂದೂ ಪರಿಷತ್‌ಗಳು ಗೋವಿನ ವಿಷಯವನ್ನೇ ದೊಡ್ಡದು ಮಾಡಿ ನಿತ್ಯವೂ



ಆ ಪ್ರದೇಶವನ್ನು ಕ್ರಿಮಿನಲ್ ಕೃತ್ಯಗಳಿಂದ ಜರ್ಝರಿಯುವಂತೆ ಮಾಡಿದ್ದಾರೆ. ಅಲ್ಪಸಂಖ್ಯಾತ ಮುಸ್ಲಿಮರ ಮೇಲೆ ಸತತ ಧಾಳಿಗಳೂ ನಡೆಯುತ್ತಿವೆ. ಹಲವು ಹಿಂಸೆ-ಕ್ರೌರ್ಯ-ಕೊಲೆಗಳಲ್ಲಿ

ಈ ವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ಪರ್ಯಾವಸಾನವಾಗಿದೆ. ಅಲ್ಲೆಲ್ಲಾ ಗೋವು ರಕ್ಷಣೆ ಹೆಸರಿನಲ್ಲಿ ಚಟುವಟಿಕೆ ಆರಂಭಿಸಿ, ಜನರ ಮುಗ್ಧ ಮನಸ್ಸನ್ನು ಸೆಳೆದು ನಂತರ ಕೋಮುವಾದಿ ವಿಭಜನೆ ತರಲು ಬಳಸಲಾಗುತ್ತಿದೆ.

ಕರ್ನಾಟಕದಲ್ಲಿ ಜಿಲ್ಲಾ-ತಾಲ್ಲೂಕು ಪಂಚಾಯತ್ ಚುನಾವಣೆಗಳು ಘೋಷಿತಗೊಂಡಿವೆ. ಮೈತ್ರಿ ಕೂಟದ ಭಾಗೀದಾರ ಪಕ್ಷಗಳಲ್ಲಿನ ಭಿನ್ನಾಭಿಪ್ರಾಯ ಮತ್ತು ಆಯಾ ಪಕ್ಷಗಳೊಳಗಿನ ಒಳಜಗಳ-ಒಡಕುಗಳು ಮಧ್ಯಂತರ ಚುನಾವಣೆಯ ಸಾಧ್ಯತೆಗಳ ಬಗ್ಗೆ ಅನುಮಾನ ಹೆಚ್ಚಿಸಿದೆ. ಬಿಜೆಪಿ ಪಕ್ಷದೊಳಗೆ ಕಚ್ಚಾಟ ಹೆಚ್ಚಿದೆ. ಹಲವು ಪ್ರಮುಖರು ಪಕ್ಷ ತೊರೆಯುತ್ತಿದ್ದಾರೆ. ಅಧಿಕಾರದಿಂದ ದೂರ ಎಂದು ನಿರಾಶರಾದವರು ಪಕ್ಷವನ್ನು ತೊರೆಯಲಿದ್ದಾರೆ. ಇದು ಬಿಜೆಪಿಗೆ-ಸಂಘ ಪರಿವಾರಕ್ಕೆ ಚಿಂತೆ ತಂದಿರುವ ಪರಿಸ್ಥಿತಿ. ಹೀಗಾಗಿ ರಾಜ್ಯದಲ್ಲಿ ಹಲವೆಡೆ ಕೋಮು ಪ್ರಚೋದನೆ - ಗಲಭೆಗಳನ್ನೋ ಅದು ಆಶ್ರಯಿಸುವುದರತ್ತ ಹೆಜ್ಜೆ ಇಡುತ್ತಿದೆ. ಹಿಂದೆಲ್ಲಾ ಬಿಜೆಪಿ ರಾಜಕೀಯವಾಗಿ ಹಿಂಜರಿತ ಅನುಭವಿಸಿದಾಗಲೆಲ್ಲಾ ಒಂದು ಮೂಲ ನೆಲೆ ಮನೋಭೂಮಿಕೆ ಸಿದ್ಧಪಡಿಸಲು ಆರ್‌ಎಸ್‌ಎಸ್ ಕೋಮು ಗಲಭೆಗಳನ್ನು ಹುಟ್ಟು ಹಾಕಿದ್ದನ್ನು ಸ್ಮರಿಸಬಹುದು.

ಈ ಗೋ ಯಾತ್ರೆಯನ್ನು ಸಹ ಧಾರ್ಮಿಕತೆಯ ಭಾವನೆಗಳನ್ನು ಕ್ರೋಢೀಕರಿಸಲು, ಜನಸಾಮಾನ್ಯರನ್ನು ಸೆಳೆಯಲು ವಾಹಕವಾಗಿ ಬಳಸಲಾಗುತ್ತಿದೆ. ಇದರ ಮುಂದಿನ ಹಂತದ ಕಾರ್ಯಕ್ರಮ ರಾಜ್ಯದಾದ್ಯಂತ ಕೋಮು ವಿಭಜನೆ ತರುವ ಹುನ್ನಾರಗಳು ಎಂಬುದನ್ನು ಎಚ್ಚರಿಕೆಯಿಂದ ಗಮನಿಸಬೇಕು.

ಎಚ್ಚರ ವಹಿಸಿರದ ನಾಯಕರು

ಸಂಘ ಪರಿವಾರದ ಈ ಗುಪ್ತ ಅಜೆಂಡಾವನ್ನು ಅರಿಯದೇ ಅಥವಾ ನಿರ್ಲಕ್ಷಿಸಿ ಕೇಂದ್ರದ ಕಾಂಗ್ರೆಸ್ ಮಂತ್ರಿ ರಾಜಶೇಖರನ್, ಕೆಲವಡೆ ಪಿಜಿಆರ್ ಸಿಂಧ್ಯಾ ಒಳಗೊಂಡು ಜೆಡಿ(ಎಸ್) ನಾಯಕರು, ಸಚಿವ ರಾಮಲಿಂಗಾರೆಡ್ಡಿ, ಮಿರಾಜುದ್ದೀನ್ ಪಟೇಲ್‌ರಂಥವರು ಗುರುತಿಸಿಕೊಳ್ಳುತ್ತಿದ್ದಾರೆ. ಯಾತ್ರೆ ಸ್ವಾಗತಿಸುತ್ತಿದ್ದಾರೆ. ಇದು ಸಂಘ ಪರಿವಾರದ ಗುಪ್ತ ಅಜೆಂಡಾಕ್ಕೆ ಇತರೆ ಜಾತ್ಯತೀತ ರಾಜಕೀಯ ಪಕ್ಷಗಳೊಳಗಿನ ಜನರನ್ನು ಸೆಳೆಯಲು ಸಹಾಯಕವಾಗಲಿದೆ ಎಂಬುದನ್ನು ಎಚ್ಚರದಿಂದ ಗಮನಿಸಬೇಕು. ಗೋವಿನ ಮೇಲಿನ ಪ್ರೀತಿ ಅಭಿಮಾನ ಬೇರೆ - ರಾಜಕೀಯ ದುರುದ್ದೇಶದ ಬಳಕೆ ಬೇರೆ ಎಂಬುದನ್ನು ಅರಿಯಬೇಕು.

ಭಾಷಾಂಧತೆ ಕೆರಳಿಸುವವರ ಮೇಲೆ ನಿಷ್ಠುರ ಕ್ರಮ ಜರುಗಿಸಲು ಸಿಪಿಐ(ಎಂ) ಆಗ್ರಹ


ಬೆಳಗಾವಿ ಜಿಲ್ಲೆಯ ಪ್ರದೇಶದಲ್ಲಿ ಕರ್ನಾಟಕ-ಮಹಾರಾಷ್ಟ್ರ ಗಡಿ ಪ್ರಶ್ನೆಯನ್ನು ಕುರಿತು ಭಾಷಾಂಧತೆಯನ್ನು ಪರಸ್ಪರ ಪ್ರಚೋದಿಸುತ್ತಿರುವ ಮಹಾರಾಷ್ಟ್ರ ಏಕೀಕರಣ ಸಮಿತಿ ಹಾಗೂ ಕರ್ನಾಟಕ ರಕ್ಷಣಾ ವೇದಿಕೆಯ ಕೃತ್ಯಗಳನ್ನು ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ಖಂಡಿಸಿದೆ. ಭಾಷಾಂಧತೆಯನ್ನು ನಿಗ್ರಹಿಸಲು ಸರ್ಕಾರ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಆಗ್ರಹಿಸಿದೆ.

ಉಭಯ ಭಾಷಿಕರು ಅಂತಹ ಯಾವುದೇ ಪ್ರಚೋದನೆಗಳಿಗೆ ಒಳಗಾಗಬಾರದು, ಶಾಂತಿ-ಸೌಹಾರ್ದತೆ ಕಾಪಾಡಿಕೊಂಡು ಬರಬೇಕೆಂದು ಜನತೆಯಲ್ಲಿ ಸಿಪಿಐ(ಎಂ) ಮನವಿ ಮಾಡಿದೆ.

ಕರ್ನಾಟಕ ರಕ್ಷಣಾ ವೇದಿಕೆಯು ಇತ್ತೀಚಿನ ದಿನಗಳಲ್ಲಿ ಪ್ರಜಾಸತ್ತಾತ್ಮಕ ವಿಧಾನಗಳನ್ನು ನಿರ್ಲಕ್ಷಿಸಿ ವೈಯಕ್ತಿಕ ಧಾಳಿಗಳನ್ನ ಮಾಡುತ್ತಿದೆ. ಇದನ್ನು ಸರ್ಕಾರ ನಿಯಂತ್ರಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಭ್ರಷ್ಟತೆಗೆ ಕಡಿವಾಣ

ಲೋಕಾಯುಕ್ತರು ಮತ್ತು ಸರ್ಕಾರದ ನಡುವೆ ಬಿಸಿಬಿಸಿ ಮಾತುಗಳು. ಭ್ರಷ್ಟರನ್ನು ಮಾಲುಸಮೇತ ಹಿಡಿದಿದ್ದೇವೆ. ಆದರೆ ಅವರ ಮೇಲೆ ಕ್ರಮ ಜರುಗಿಸುತ್ತಿಲ್ಲ ಎಂಬುದು ಲೋಕಾಯುಕ್ತ ನ್ಯಾ. ಎನ್.ವೆಂಕಟಾಚಲಯ್ಯನವರ ಆಕ್ರೋಶದ ದೂರು. ನಾವು ಕ್ರಮ ವಹಿಸಲು ಪ್ರಕ್ರಿಯೆ ಆರಂಭಿಸಿದಂತೆಯೇ ಆರೋಪಿಗಳು ನ್ಯಾಯಾಲಯದ ಮೊರೆ ಹೋಗುತ್ತಾರೆ. ನಾವೇನು ಮಾಡೋದು ಎಂಬುದು ಮುಖ್ಯಮಂತ್ರಿ ಹಾಗೂ ಮುಖ್ಯಕಾರ್ಯದರ್ಶಿಗಳ ಹೇಳಿಕೆ. ಇದರೊಂದಿಗೆ 'ಲೋಕಾಯುಕ್ತರಿಗೆ ಹೆಚ್ಚಿನ ಅಧಿಕಾರ ಕೊಡಿ' ಎಂಬುದು ಒಂದು ವಲಯದ ಪ್ರಬಲ ಆಗ್ರಹ. 'ಈ ಹೆಚ್ಚಿನ ಅಧಿಕಾರ ಎಂಬುದು ಲೋಕಾಯುಕ್ತರು ಸ್ವಯಂಪ್ರೇರಣೆಯಿಂದ ಅಧಿಕಾರ ಚಲಾಯಿಸಲು ನೀಡುವ ಅವಕಾಶ. ಹೀಗಾದರೆ ಫಿರ್ಯಾದುದಾರನೇ ನ್ಯಾಯಾಧೀಶನಾಗುತ್ತಾನೆ' ಇದು ಭ್ರಷ್ಟಾಚಾರ ನಿರ್ಮೂಲನೆಗೆ ಹೇಗೆ ಸಹಕಾರಿ ಎಂಬುದು ಮುಖ್ಯಕಾರ್ಯದರ್ಶಿ ಬಿ.ಕೆ.ದಾಸ್ ರ ಮರು ಪ್ರಶ್ನೆ!



ಒಂದಂತೂ ನಿಜ, ಲೋಕಾಯುಕ್ತ ನ್ಯಾ. ಎನ್.ವೆಂಕಟಾಚಲರವರ ತಂಡ ರಾಜ್ಯದಾದ್ಯಂತ ಮಿಂಚಿನ ಧಾಳಿ ನಡೆಸಿ ಭಾರಿ ತಿಮಿಂಗಲಗಳನ್ನು ಹಿಡಿದಿದೆ. ಭ್ರಷ್ಟಾತಿ ಭ್ರಷ್ಟರನ್ನು ಜಾಲ ಹಾಕಿ ಬೀಳಿಸಿದೆ. ಅಪಾರ ಪ್ರಮಾಣದ ಅಕ್ರಮ ಆಸ್ತಿ, ಹಣವನ್ನು ವಶಪಡಿಸಿಕೊಂಡಿದೆ. ಇವರಲ್ಲಿ ಬಹುತೇಕರು ಸರ್ಕಾರದ ಉನ್ನತ ಆಯಕಟ್ಟಿನ ಅಧಿಕಾರಿಗಳು. ಅದರ ವಿವರಣೆಗಳನ್ನೆಲ್ಲಾ ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ನೀಡಿ, ನಿರೀಕ್ಷಿಸಿದೆ.

ಈಚಿನ ಒಂದೆರಡು ಉದಾಹರಣೆ ಗಮನಿಸಿ. ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ ಕೋಟ್ಯಾಂತರ ರೂಪಾಯಿಗಳ ಔಷಧಿ ಗುಳುಂ, ಅದನ್ನು ಬಾವಿಯಲ್ಲಿ ಮುಳುಗಿಸಿಡಲಾಗಿತ್ತು. ಬೆಂಗಳೂರು ಮಹಾನಗರ ಪಾಲಿಕೆಯ ಮುಖ್ಯಇಂಜಿನಿಯರ್‌ನಿಂದ 10 ಲಕ್ಷ ನಗದು, 3 ಕೋಟಿ ಚಿನ್ನ, 7 ಕೆ.ಜಿ. ಬೆಳ್ಳಿ, ಒಟ್ಟು 5 ಕೋಟಿ ಆಸ್ತಿ. ಇನ್ನೊಬ್ಬ ಎಕ್ಸಿಕ್ಯೂಟಿವ್ ಇಂಜಿನಿಯರ್ ಒಂದೂವರೆ ಕೆಜಿ ಚಿನ್ನ, 50 ಲಕ್ಷ ಆಭರಣ, ನಿವೇಶನಗಳು - ಕಡಿಮೆಯೆಂದರೂ 4 ಕೋಟಿಯಷ್ಟು - ಕೆಲವೇ ದಿನಗಳ ಹಿಂದೆ ಮೈಸೂರು ಸೋಪ್ಸ್ ಕಾರ್ಖಾನೆಯ ಅಧಿಕಾರಿಯಿಂದ ಕೋಟ್ಯಾಂತರ ಅಕ್ರಮ ಆಸ್ತಿ - ಹೀಗೆ.. ಒಟ್ಟು ಇದುವರೆಗೆ 14,546 ಪ್ರಕರಣಗಳು ಸಿಕ್ಕಿವೆ. 9778 ಪ್ರಕರಣಗಳಲ್ಲಿ ಮಾತ್ರ ಕ್ರಮ ವಹಿಸಲಾಗಿದೆ ಎಂಬುದು (2001 ರಿಂದ 05 ರವರೆಗೆ)

ಅಧಿಕಾರಶಾಹಿಯಲ್ಲಿ ಆಳವಾಗಿ ಬೇರು ಬಿಟ್ಟಿರುವ ಭ್ರಷ್ಟಾಚಾರ ಎಷ್ಟು ವಿಪರೀತ ಎಂಬುದನ್ನು ಲೋಕಾಯುಕ್ತರ ಕ್ರಮಗಳು ಬಹಿರಂಗಗೊಳಿಸುತ್ತವೆ. ಇಂತಹ ಭ್ರಷ್ಟ ಅಧಿಕಾರಿಗಳಿಗೆ ಅಧಿಕಾರಸ್ಥ ಅಥವಾ ವಿರೋಧ ಪಕ್ಷಗಳ ಮುಖಂಡರ ಅಭಯಹಸ್ತ - ಹಸ್ತಕ್ಷೇಪವಿರುವುದು ಹೊರಬಂದಿದೆ. ಹಿಂದೆ ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಕೃಷ್ಣರಾಜಪುರ, ಮಹದೇವಪುರ ಒಳಗೊಂಡ ಪುರಸಭೆಗಳಲ್ಲಿ ನಡೆದ 300 ಕೋಟಿಯಷ್ಟು ಹಗರಣದಲ್ಲಿ ಶಾಮೀಲಾದ ಅಧಿಕಾರಿಗಳನ್ನು ಪತ್ತೆ ಹಚ್ಚಲಾಗಿತ್ತು. ಅವರನ್ನು ಸಾರ್ವಜನಿಕ ಒತ್ತಡದಿಂದ ಅಮಾನತ್ತು ಮಾಡಲಾಗಿತ್ತು. ಆದರೆ ವಿಚಾರಣೆ ಇನ್ನೂ ಪೂರ್ಣಗೊಳ್ಳದೆ ಇರುವಾಗಲೇ 8 ಜನ ಅಧಿಕಾರಿಗಳ ಅಮಾನತ್ತನ್ನು ಸರ್ಕಾರ ಹಿಂತೆಗೆದುಕೊಂಡು ಪುನಃ ಆಯಾ ಸ್ಥಾನಗಳಿಗೆ ಕಳಿಸಿತು.

ಸರ್ಕಾರ ಗಂಭೀರವಾಗಿ ಈ ವಿಷಯವನ್ನು ಪರಿಗಣಿಸಬೇಕು. ವ್ಯವಸ್ಥೆಯ ಒಂದು ಮುಖ್ಯಭಾಗವೇ ಆಗಿರುವ ಇಂತಹ ಭ್ರಷ್ಟಾಚಾರದ ವಿರುದ್ಧ ಸಾರ್ವಜನಿಕರ ಪ್ರಬಲ ಪ್ರತಿರೋಧ, ಜಾಗೃತಿ ಇರಬೇಕು. ಅಂತಹ ಕಾನೂನು ತಿದ್ದುಪಡಿ ತರುವ ಬಗ್ಗೆ ಸಂಪುಟದಲ್ಲಿ ಚರ್ಚಿಸಲಾಗುವುದು ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಇದು ನಾಲಿಗೆ ಮೇಲಿನ ಗುಳ್ಳೆಯಾಗದೇ ದೃಢಕ್ರಮ ವಹಿಸಬೇಕು.

ಅದೇ ಹೊತ್ತಿನಲ್ಲಿ ಆವೇಶದಲ್ಲಿ ಲೋಕಾಯುಕ್ತರು ಸಮ್ಮಿಶ್ರ ಸರ್ಕಾರ ಅವಕಾಶವಾದಿ ಎಂದೆಲ್ಲಾ ಹೇಳುವುದು ಅತಿಯಾದ ಮಾತಾಗುತ್ತದೆ. ಇಂತಹ ಮಾತುಗಳಿಗೆ ಕಡಿವಾಣ ಅಗತ್ಯ.

ಬ್ಲೇಡ್ ಕಂಪನಿಗಳು: ವ್ಯವಹಾರ ಹೊರಬರಲಿ

ಸಾವಿರಾರು ಗ್ರಾಹಕರಿಗೆ ಸುಮಾರು 200 ಕೋಟಿಯಷ್ಟು ಹಣವನ್ನು ಪಂಗನಾಮ ಹಾಕಿ ಭೂಗತನಾಗಿದ್ದ ವಿನಿವಿಂಕ್‌ನ ಶ್ರೀನಿವಾಸ ಶಾಸ್ತ್ರಿಯನ್ನು ಆಂಧ್ರದ ವಿಶಾಖಪಟ್ಟಣಂನಲ್ಲಿ ಪೊಲೀಸರು ಬಂಧಿಸಿದ್ದು ತನಿಖೆಯಲ್ಲಿ ವಿಶೇಷ ಘಟ್ಟವಾಗಿದೆ. ವಿಚಾರಣೆಯಲ್ಲಿ ತದ್ವಿರುದ್ಧ ಹೇಳಿಕೆ ನೀಡುತ್ತಿದ್ದ ಶಾಸ್ತ್ರಿಯನ್ನು ಮಂಪರು ಪರೀಕ್ಷೆಗೆ ಒಳಪಡಿಸಿದಾಗ ಹಲವಾರು ಮಹತ್ವದ ಮಾಹಿತಿಗಳು ಲಭ್ಯವಾಗಿದ್ದು ಇವರಲ್ಲಿ ಪೊಲೀಸ್ ಅಧಿಕಾರಿಗಳು, ಪ್ರತಿಷ್ಠಿತರು, ಭೂಗತಲೋಕದ ದೊರೆಗಳು ಗೋಚರವಾಗಿರುವ ವರದಿ ಇದೆ. ಈ ವಿವರಗಳನ್ನು ಪರಿಶೀಲಿಸಿ ಸಾರ್ವಜನಿಕರೆದುರು ಬಹಿರಂಗಪಡಿಸಬೇಕು. ಹಾಗೆಯೇ ಇಂತಹ ಇನ್ನೂ ಹಲವು ಬ್ಲೇಡ್ ಕಂಪನಿಗಳ ಬಗ್ಗೆ ವಿಚಾರಣೆ ನಡೆಸುತ್ತಿರುವ ಸದನ ಸಮಿತಿಯ ಅದನ್ನು ಆದಷ್ಟು ಬೇಗ ಪೂರ್ಣಗೊಳಿಸಿ ನಿಷ್ಠುರ ವರದಿ ನೀಡಬೇಕು. ಉದಾರೀಕರಣದಲ್ಲಿ ಕ್ರಮಗಳೂ ಜರುಗಬೇಕು. ಉದಾರೀಕರಣದಲ್ಲಿ ಉಂಡಮನೆ ಜಂತಿ ಎಣಿಸುವವರ ಬಗ್ಗೆ ಎಚ್ಚರಿಕೆ ಬೇಕು.

ಭೂಮಿ, ಆಹಾರ, ಉದ್ಯೋಗಕ್ಕೆ ಒತ್ತಾಯಿಸಿ ಸಿಪಿಐ(ಎಂ) ಸಾಮೂಹಿಕ ಪಿಕೆಟಿಂಗ್

ಭೂಮಿ, ಆಹಾರ, ಉದ್ಯೋಗದ ಪ್ರಶ್ನೆಗಳನ್ನು ಮುಂದಿಟ್ಟು ಸಿಪಿಐ(ಎಂ) ದ.ಕ.ಜಿಲ್ಲಾಸಮಿತಿಯ ನೇತೃತ್ವದಲ್ಲಿ ಸುಮಾರು ಒಂದು ಸಾವಿರ ಕಾರ್ಯಕರ್ತರು ಅಕ್ಟೋಬರ್ 28ರಂದು ದ.ಕ ಜಿಲ್ಲಾಧಿಕಾರಿಗಳ ಕಛೇರಿ ಮುಂದುಗಡೆ ಪಿಕೆಟಿಂಗ್ ಚಳುವಳಿ ನಡೆಸಿ ಸಾಮೂಹಿಕ ಬಂಧನಕ್ಕೊಳಗಾದರು. ಸಿಪಿಐ(ಎಂ) ಪಕ್ಷದ ಕಛೇರಿಯಿಂದ ಹೊರಟ ಪಕ್ಷದ ಕಾರ್ಯಕರ್ತರ ಮೆರವಣಿಗೆ ಜಿಲ್ಲಾಧಿಕಾರಿಗಳ ಕಛೇರಿ ಎದುರು ಪ್ರದರ್ಶನ ನಡೆಸಲಾಯಿತು.

ಪ್ರದರ್ಶನಗಾರರರನ್ನು ಉದ್ದೇಶಿಸಿ ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾಸಮಿತಿ ಕಾರ್ಯದರ್ಶಿ ಕೆ.ಆರ್. ಶ್ರೀಯಾನ್‌ರವರು ಮಾತನಾಡುತ್ತಾ ಭೂಮಿ, ಆಹಾರ, ಉದ್ಯೋಗದ ಪ್ರಶ್ನೆ ಭಾರತ ದೇಶದ ಜನತೆಯ ಮುಖ್ಯ ಪ್ರಶ್ನೆಯಾಗಿದ್ದು, ಪಕ್ಷ ಅಗಸ್ಟ್ ಸೆಪ್ಟೆಂಬರ್ ತಿಂಗಳಲ್ಲಿ ಈ ಬಗ್ಗೆ ದೇಶವ್ಯಾಪಿ ಜನಜಾಗೃತಿ ಮೂಡಿಸಲು ಮನೆಮನೆ ಭೇಟಿ, ಜಾಥಾ, ಸಮಾವೇಶ, ಧರಣಿ ಸತ್ಯಾಗ್ರಹ ನಡೆಸಿ, ಪಿಕೆಟಿಂಗ್ ಚಳುವಳಿ ನಡೆಸಲು ಕರೆ ನೀಡಿದೆ. ಬಡತನ ರೇಖೆಗಿಂತ ಕೆಳಗೆ ಎಂಬ ವರ್ಗೀಕರಣದಿಂದಾಗಿ ಅಸಂಖ್ಯಾತ ಬಡವರನ್ನು ಬಡತನ ರೇಖೆಗಿಂತ ಹೊರಗಡೆ ಇಡುವ ಪ್ರಯತ್ನ ಖಂಡನೀಯ. ಎಲ್ಲಾ ಬಡವರಿಗೆ ಬಡತನ ರೇಖೆಗಿಂತ ಕೆಳಗಿರುವವರಿಗೆ ನೀಡಬೇಕಾದ ಪಡಿತರ ಚೀಟಿಯನ್ನು ನೀಡಬೇಕು. ರೇಷನ್ ಸಾಮಗ್ರಿಯಲ್ಲಿ ಕಡಿಮೆ ದರದಲ್ಲಿ ಆಹಾರ ವಸ್ತು ನೀಡಬೇಕು ಎಂದು ಅವರು ಹೇಳಿದರು. ಅಸಂಖ್ಯಾತ ಬಡವರಿಗೆ ಉಳಕೊಳ್ಳಲು ಮನೆ, ವಸತಿ ಇಲ್ಲ, ಸರಕಾರಿ ಭೂಮಿಯಲ್ಲಿ ವಾಸವಾಗಿದ್ದ ನಾಗರೀಕರಿಗೆ ಹಕ್ಕುಪತ್ರವನ್ನು ಕೂಡಾ ನೀಡದೆ ಅಲೆದಾಡಿಸುತ್ತಿರುವುದು ನಮ್ಮ ದೇಶದ ದುರಂತ ಎಂದ ಅವರು ಜನಸಾಮಾನ್ಯರ ಹಕ್ಕುಗಳಿಗಾಗಿ ಸಿಪಿಐ(ಎಂ) ಪಕ್ಷ ನಿರಂತರ ಹೋರಾಟ ನಡೆಸುತ್ತದೆ ಎಂದರು.



ಸರಕಾರ ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿ ಉದ್ಯೋಗ ಸೃಷ್ಟಿಸುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎಂದ ಅವರು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ ಶ್ಲಾಘನೀಯ ಹೆಜ್ಜೆ ಎಂದರು. ಈ ಯೋಜನೆಯನ್ನು ಇನ್ನಷ್ಟು ವಿಸ್ತರಿಸಬೇಕೆಂದು ಹೇಳಿದರು.

ಕೇಂದ್ರ ಸರಕಾರದ ರಾಷ್ಟ್ರೀಯ ಸಾಮಾನ್ಯ ಕಾರ್ಯಕ್ರಮ ಜನಪರ ಅಂಶಗಳನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ತರಲು ಯುಪಿಎ ಸರಕಾರ ಮುಂದಾಗಬೇಕು ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಬಿ.ಮಾಧವರವರು ಒತ್ತಾಯಿಸಿದರು. ನಿರುದ್ಯೋಗ ಸಮಸ್ಯೆ ಇಂದು ಯುವಸಮುದಾಯವನ್ನು ಕಾಡುತ್ತಿದ್ದು ನಿರುದ್ಯೋಗ ಭತ್ಯೆಯನ್ನು ಕೊಡಬೇಕೆಂಬ ಕೇಳಿಕೆಯನ್ನು ಯುವಜನರು ಕೇಳುತ್ತಿದ್ದಾರೆ. ಸರಕಾರ ಲಾಭದಾಯಕ ಸಾರ್ವಜನಿಕ ಉದ್ದಿಮೆಗಳನ್ನು ಮಾರಾಟ ಮಾಡುವುದಕ್ಕೆ ಸಿಪಿಐ(ಎಂ) ಈಗಾಗಲೇ ವಿರೋಧ ವ್ಯಕ್ತಪಡಿಸಿದೆ. ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಮಾತ್ರವಲ್ಲದೆ, ಕೇಂದ್ರ ಹಾಗೂ ರಾಜ್ಯಸರಕಾರಿ ಕಛೇರಿಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು. ಭೂಮಿಯ ಪ್ರಶ್ನೆ ಮುಖ್ಯವಾಗಿದ್ದು ಹೆಚ್ಚುವರಿ ಭೂಮಿಯನ್ನು ಭೂರಹಿತರಿಗೆ ವಿತರಿಸಲು ಸರಕಾರ ಸಮಗ್ರ ಭೂಸುಧಾರಣೆ ಜಾರಿಗೊಳಿಸಬೇಕೆಂದು ಮಾಧವ ಒತ್ತಾಯಿಸಿದರು.


ಜಿಲ್ಲಾಧಿಕಾರಿಗಳ ಕಛೇರಿಗೆ ಮುತ್ತಿಗೆ ಹಾಕಿದ ಸಿಪಿಐ(ಎಂ) ಪಕ್ಷದ ಸಾವಿರಾರು ಕಾರ್ಯಕರ್ತರನ್ನು ಪೊಲೀಸರು ಬಂಧನ ಗೊಳಿಸಿ ನಂತರ ಬಿಡುಗಡೆಗೊಳಿಸಿದರು.

ಪಿಕೆಟಿಂಗ್ ಚಳುವಳಿಯ ನೇತೃತ್ವವನ್ನು ಪಕ್ಷದ ಜಿಲ್ಲಾ ಮುಖಂಡರುಗಳಾದ ಜೆ.ಬಾಲಕೃಷ್ಣಶೆಟ್ಟಿ, ರಾಮಚಂದ್ರ, ಉಚ್ಚಿಲ್, ಯು.ಬಿ.ಲೋಕಯ್ಯ, ಅಬ್ರಹಾಂ ಕರ್ಕಡ, ವಸಂತ ಆಚಾರಿ, ಕೆ.ಯಾದವಶೆಟ್ಟಿ, ಮಂಜಪ್ಪ, ಸುಕುಮಾರ್, ಕೃಷ್ಣಪ್ಪ ಕೊಂಚಾಡಿ, ಸುನೀಲ್ ಕುಮಾರ್, ಪದ್ಮಾವತಿ ಎಸ್.ಶೆಟ್ಟಿ, ಸದಾಶಿವದಾಸ್, ಬಾಬುದೇವಾಡಿಗ ಮುಂತಾದವರು ವಹಿಸಿದ್ದರು.

ಪಿಕೆಟಿಂಗ್ ಚಳುವಳಿಯನ್ನು ಬಿ.ಸಿ.ರೋಡಿನಲ್ಲಿ, ಬೆಳ್ತಂಗಡಿ, ಸುಳ್ಯದಲ್ಲೂ ಕೂಡಾ ನಡೆಸಲಾಗಿದೆ.

ನವೆಂಬರ್ 17ರಿಂದ ಜಿಲ್ಲಾಧಿಕಾರಿಗಳ ಕಛೇರಿ ಆವರಣದಲ್ಲಿ ಠಿಕಾಣಿ

ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಜನವಾದಿ ಮಹಿಳಾ ಸಂಘಟನೆಗಳ ನೇತೃತ್ವದಲ್ಲಿ ಇದೇ ಅಕ್ಟೋಬರ್ 24 ರಂದು ಯಶಸ್ವಿ ಭೂ ಸಮಾವೇಶ ನಡೆದಿದೆ. ಕೆಂಗೇರಿ ಸುತ್ತಮುತ್ತಲ ಹತ್ತಾರು ಪ್ರದೇಶ-ಗ್ರಾಮಗಳಿಂದ ಸುಮಾರು 500 ಜನರು ಪಾಲ್ಗೊಂಡು, ಉಚಿತ ನಿವೇಶನ ಹಕ್ಕುಪತ್ರ, ಉಳುಮೆ ಭೂಮಿ ಹಕ್ಕುಪತ್ರಕ್ಕಾಗಿ ಒತ್ತಾಯಿಸಿ ನವೆಂಬರ್ 17-18 ರಂದು ಬೆಂಗಳೂರು ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಬೃಹತ್ 'ಠಿಕಾಣಿ' ಹೂಡಲು ನಿರ್ಧರಿಸಲಾಗಿದೆ.



ಕೆಂಗೇರಿಯಲ್ಲಿ ಭೂಸಮಾವೇಶದ ನಿರ್ಧಾರ

ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಕಾಂ. ವೆಂಕಟಾಚಲಯ್ಯರವರ ಅಧ್ಯಕ್ಷತೆಯಲ್ಲಿ ನಡೆದ ಸಮಾವೇಶದಲ್ಲಿ ಗುಡಿಸಲು ನಿವಾಸಿಗಳ ಬದುಕಿನ ಅತಂತ್ರ ಪರಿಸ್ಥಿತಿಗಳು, ಸರ್ಕಾರಕ್ಕೆ ಸೇರಿದ ಅರ್ಧ, ಒಂದು ಎರಡು ಎಕರೆ ಜಮೀನಿನಲ್ಲಿ ಹತ್ತಾರು ವರ್ಷಗಳಿಂದ ಉಳುಮೆ ಮಾಡುವ ಬಡ ರೈತರಿಗೆ ಹಕ್ಕುಪತ್ರ ನೀಡಲು ಮನಸ್ಸಿಲ್ಲದ ಸರ್ಕಾರ ಬಹುರಾಷ್ಟ್ರೀಯ ಕಂಪನಿಗಳಿಗೆ, ಖಾಸಗಿ ಕಂಪನಿಗಳಿಗೆ, ಜಾತಿವಾದಿ ಕೋಮುವಾದಿ ಮಠ ಮಾನ್ಯಗಳಿಗೆ ನೂರಾರು ಎಕರೆ ಭೂಮಿ ನೀಡುತ್ತಿರುವ ಅಂಶಗಳು ಅನಾವರಣಗೊಂಡವು. ಹತ್ತಾರು ವರ್ಷಗಳಿಂದ ಬಂಡವಾಳಶಾಹಿ ರಾಜಕೀಯ ಪಕ್ಷಗಳ ಪುಡಾರಿಗಳ ಭರವಸೆಯ ಹುಲ್ಲುಕಡ್ಡಿ ಆಸರೆಯಲ್ಲಿ ಬದುಕುತ್ತಾ ಇತ್ತ ಮುಳುಗದೆ ಅತ್ತ ತೇಲದೆ ಅತಂತ್ರ ಬದುಕು ನಡೆಸುತ್ತಿರುವ ಗುಡಿಸಲು ನಿವಾಸಿ ಹಕ್ಕಿ ಪಿಕ್ಕಿ ಜನಾಂಗದ ಜನರ ಬದುಕೂ ಇಲ್ಲಿ ಅನಾವರಣಗೊಂಡಿತು. ಹಕ್ಕುಪತ್ರ ಕೊಡಿಸುವುದಾಗಿ ಬಡವರಿಂದ ಸಾವಿರ, 2 ಸಾವಿರ, ಹಲವು ಸಾವಿರಗಳನ್ನು ವಸೂಲಿ ಮಾಡಿಯೂ ಏನೂ ಮಾಡದ ದುಃಖ ದುಮ್ಮಾನಗಳನ್ನು ಜನರು ಈ ಸಮಾವೇಶದಲ್ಲಿದ ವಿವರವಾಗಿ ಹಂಚಿಕೊಂಡರು.

ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ಕಾಂ. ಜಿ.ಎನ್.ನಾಗರಾಜ್ ಸಮಾವೇಶ ಉದ್ಘಾಟಿಸಿದರು. ಬೆಂಗಳೂರು ಯಾರಿಗೆ ಸೇರಿದ್ದು? ಹತ್ತಾರು ವರ್ಷಗಳಿಂದ ಇಲ್ಲಿ ನೆಲೆಸಿ ದುಡಿದು ಬದುಕುವ ಬಡವರದ್ದೋ, ಅಥವಾ ಹೊರಗಿನಿಂದ ದುಡಿಯುವ ಜನರನ್ನು ಸುಲಿಗೆ ಮಾಡಲು ಬಂದ ಶ್ರೀಮಂತರದೋ ಎಂಬ ಪ್ರಶ್ನೆಯನ್ನು ಈ ಸಮಾವೇಶ ಎತ್ತಿದೆ ಎಂದರು.


ಕೋಟಿ ಶ್ರೀಮಂತರ ಪಾದ ತೊಳೆಯಲು ನಿಂತಿರುವ ಸರ್ಕಾರವು ಶ್ರೀಮಂತರಿಗೆ ಇನ್ನಿಲ್ಲದ ರಿಯಾಯಿತಿ ವಿನಾಯಿತಿ ನೀಡುತ್ತಿದೆ. ನಾರಾಯಣ ಮೂರ್ತಿಯವರ ಇನ್‌ಫೋಸಿಸ್ ಸಂಸ್ಥೆಗೆ ಹಿಂದೆ 300 ಎಕರೆ, ಈಗ ಸುಮಾರು 800 ಎಕರೆ ಭೂಮಿ ನೀಡಲಾಗಿದೆ. ಈ ಭೂಮಿಗೆ ಸುಮಾರು 50-60 ಕೋಟಿಗಳಷ್ಟು ಸ್ಟ್ಯಾಂಪ್ ಡ್ಯೂಟಿ ರದ್ದುಪಡಿಸಲಾಗಿದೆ. ಹತ್ತಾರು ಲಕ್ಷ ರೂಪಾಯಿಗಳನ್ನು ತೆತ್ತು ಬಡವರು (ಕೆಂಗೇರಿ ಉಪ) ನಗರದಲ್ಲಿ ನಿವೇಶನ ಖರೀದಿಸಲು ಸಾಧ್ಯವೇ ಇಲ್ಲ.

ಬೆಂಗಳೂರು ಯಾರಪ್ಪನ ಜಾಹೀರೂ ಅಲ್ಲ. ಬೆಂಗಳೂರಿನಲ್ಲಿ ವಿಧಾನಸೌಧ, ಅಲ್ಲೊಂದು ಸರ್ಕಾರ ಬರುವುದಕ್ಕೆ ನೂರಾರು-ಸಾವಿರಾರು ವರ್ಷಗಳ ಮುಂಚೆಯೇ ಹಳ್ಳಿಗಳು ಅಸ್ತಿತ್ವದಲ್ಲಿದ್ದವು. ನಮ್ಮ ಪೂರ್ವಿಕರು ಗೋಮಾಳ, ಇತರೆ ಉದ್ದೇಶಗಳಿಗೆ ಬಿಟ್ಟುಕೊಂಡಿದ್ದ ಭೂಮಿಯನ್ನೇ ಈಗ ಸರ್ಕಾರ ವಶಕ್ಕೆ ತೆಗೆದುಕೊಂಡಿರುವುದನ್ನು ಜನರ ಜಮೀನನ್ನು ಜನಕ್ಕೆ ನೀಡಬೇಕೆಂದರು.

ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಕಾರ್ಯದರ್ಶಿಯಾದ ಕಾಂ. ಗೌರಮ್ಮ ಮಾತನಾಡಿ ಸರ್ಕಾರವು ದುಡ್ಡಿದ್ದವರಿಗೆ ಒಂದು ನ್ಯಾಯ - ದುಡ್ಡಿಲ್ಲದ ಬಡವರಿಗೆ ಒಂದು ನ್ಯಾಯ ಎಂಬ ನೀತಿ ಅನುಸರಿಸುತ್ತಿದೆ. ರಾಜಕೀಯ ಪಕ್ಷ ಬಡವರಿಗೆ ಕೇವಲ ಚಿತ್ರಾನ್ನ-ಮೊಸರನ್ನ ಕೊಟ್ಟು ತಮ್ಮ ರ್‍ಯಾಲಿ ಯಶಸ್ವಿ ಮಾಡಿಕೊಳ್ಳಲು ಮಾತ್ರ ಅವರನ್ನು ಬಳಸಿಕೊಳ್ಳುತ್ತಿವೆ. ಬಡವರು ಈ ನಿಟ್ಟಿನಲ್ಲಿ ತೀವ್ರ ಸಂಘರ್ಷಕ್ಕೆ ಮುಂದಾಗಬೇಕು. ಬೆಂಗಳೂರಿನಲ್ಲಿ ವಿಜನಾಪುರದಲ್ಲಿ ಅಲ್ಲದೇ ಇತ್ತೀಚೆಗೆ ಮಂಡ್ಯ ನಗರದಲ್ಲಿ ನಡೆಸಲಾದ ಚಳುವಳಿಯಂತೆ ಚಳುವಳಿಗೆ ಮುಂದಾಗಬೇಕೆಂದರು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ಚಂದ್ರಪ್ಪ ಹೊಸ್ಕೇರಾ ಅವರು ಸಮಾವೇಶವನ್ನು ಬೆಂಬಲಿಸಿ ಮಾತನಾಡಿ, ಚಳುವಳಿಕಾರರ ಬಗ್ಗೆ ಪಟ್ಟಭದ್ರ ಹಿತಾಸಕ್ತಿಗಳು ನೂರೆಂಟು ರೀತಿಯ ಅಪಪ್ರಚಾರ ನಡೆಸುತ್ತಾರೆ ಜನ ಆ ಬಗ್ಗೆ ಎಚ್ಚರಿಕೆ ವಹಿಸಬೇಕೆಂದು ಅವರು ಕರೆ ನೀಡಿದರು.

ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ಜಿ.ಸಿ.ಬಯ್ಯಾರೆಡ್ಡಿ ಸಮಾವೇಶದಲ್ಲಿ ಸಮಾರೋಪ ಭಾಷಣ ಮಾಡಿ ಶ್ರೀಮಂತರು, ಬಂಡವಾಳದಾರರು ಭೂಕಬಳಿಕೆಯಿಂದ ಸ್ಮಶಾನಗಳೂ ಮಾಯವಾಗಿವೆ. ಬಡವರ ಶವಗಳು ನಾಯಿ ಪಾಲಾಗುವ ಸನ್ನಿವೇಶ ಬಂದಿದೆ. 50-55 ವರ್ಷಗಳ ಕಾಲ ಕಾಂಗ್ರೇಸ್, ಬಿಜೆಪಿ, ಜನತಾದಳ ಸರ್ಕಾರಗಳನ್ನು ನೋಡಿದೆವು. ಜನಕ್ಕೆ ಏನೂ ಸಿಕ್ಕಿಲ್ಲ. ರೈತರು - ಬಡವರು - ಹಕ್ಕಿಪಿಕ್ಕಿಗಳ ಬದುಕು ಬೀದಿಗೆ ಬಿದ್ದಿದೆ. ಆದರೆ ಬಾಲ ಗಂಗಾಧರನಾಥ ಸ್ವಾಮಿ, ಶಿವಪುರಿ ಸ್ವಾಮಿ, ಪಂಡಿತ ರವಿಶಂಕರ ಗುರೂಜಿ, ನೈಸ್, ಇನ್‌ಫೋಸಿಸ್ ಕಂಪನಿಗಳಿಗೆ ಕೇಳಿ ಕೇಳಿದಂತೆಲ್ಲಾ ಜಮೀನು ನೀಡಲಾಗುತ್ತಿದೆ. ಇನ್‌ಫೋಸಿಸ್ ನಾರಾಯಣ ಮೂರ್ತಿಗಳ ಒಂದು ಮಾತಿಗೆ ಹೊಸೂರು ರಸ್ತೆ ರಿಪೇರಿಗೆ 300 ಕೋಟಿ ನೀಡಲಾಯಿತು. ಬಡ ಜನರ ಗುಡಿಸಲು ಪ್ರದೇಶಗಳಲ್ಲಿ ಯಾವುದೇ ಮೂಲಭೂತ ಸೌಲಭ್ಯಗಳಿಲ್ಲದೇ ನರಳುವಂತಾಗಿದೆ. ರಾಜಾಸ್ತಾನದಲ್ಲಿ ಇತ್ತೀಚೆಗೆ ರೈತರೂ ರಾಜಧಾನಿ ಜೈಪುರದಲ್ಲಿ ನಡೆಸಿದ ಐತಿಹಾಸಿಕ 'ಮಾಹಾಠಿಕಾಣೆ' ಹೋರಾಟದಿಂದ ಅದ್ಭುತ ಜಯಗಳಿಸಿದ್ದಾರೆ. ಬೆಂಗಳೂರಿನ ಬಡರೈತರು ಗುಡಿಸಲು ನಿವಾಸಿಗಳೂ ಸಹ ಇಂತಹ ಚಳುವಳಿ ನಡೆಸಬೇಕೆಂದು ಅವರು ಕರೆ ನೀಡಿದರು.

ಆರಂಭದಲ್ಲಿ ಮಾತನಾಡಿದ ಕಾಂ. ವೆಂಕಟಾಚಲಯ್ಯ ಬಡವರಿಗೆ ನೀಡಬೇಕಾದ ಸರ್ಕಾರಿ ಜಮೀನನ್ನು ಹರಾಜು ಹಾಕಲಾಗುತ್ತಿದೆ. ಲಕ್ಷಾಂತರ ರೂ.ಗಳನ್ನು ನೀಡಿ ಬಡವರು ಭೂಮಿ ಪಡೆಯಲಾಗದು. ಅದನ್ನು ಬಡವರಿಗೆ ನೀಡಬೇಕೆಂದು ಒತ್ತಾಯಿಸಿದರು. ಕೂಲಿಕಾರರ ಸಂಘದ ಕಾಂ. ಐಸಾಕ್, ಸ್ವಾಗತಿಸಿದರು, ಮಹಿಳಾ ಸಂಘಟನೆಯ ಕಾಂ. ಯಶೋಧ ರವರು ದೃಢ ಹೋರಾಟಕ್ಕೆ ಕರೆ ನೀಡಿ ವಂದಿಸಿದರು. ವೇದಿಕೆಯಲ್ಲಿ ಪ್ರದೇಶದ ರೈತ ಮುಖಂಡರಾದ ರಾಮಣ್ಣ, ನಿವೇಶನರಹಿತರ ಹೋರಾಟ ಸಮಿತಿಯ ಮುಖಂಡರು ವೇದಿಕೆಯಲ್ಲಿದ್ದರು.



ನಿಕೃಷ್ಟ ಉದ್ಯೋಗ ಪರಿಸ್ಥಿತಿಯಲ್ಲಿಯೂ ಸಹ ರಾಷ್ಟ್ರದ ಸಾಮಾಜಿಕ ಪರಿವರ್ತನೆಯಲ್ಲಿ ಮಹತ್ತರ ಪಾತ್ರ ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಘಟನೆಯ ಅಖಿಲ ಭಾರತ 5ನೇ ಸಮ್ಮೇಳನವು ಇದೇ ಡಿಸೆಂಬರ್ 8 ರಿಂದ 11, 2005 ರ ವರೆಗೆ ಬೆಂಗಳೂರು ನಗರದ ಟೌನ್‌ಹಾಲ್‌ನಲ್ಲಿ ಅತ್ಯಂತ ಯಶಸ್ವಿಯಾಗಿ ನಡೆದಿದೆ. ಕರ್ನಾಟಕ ರಾಜ್ಯ ಈ ಹಿಂದೆ ಕಾಣದಂತಹ ಅಂಗನವಾಡಿ ನೌಕರರ ಅಭೂತಪೂರ್ವ ರ್‍ಯಾಲಿ, 'ಐಸಿಡಿಎಸ್ - ಮತ್ತು ಸರ್ಕಾರದ ಪಾತ್ರ' ವಿಷಯದ ಕುರಿತ ರಾಷ್ಟ್ರಮಟ್ಟದ ವಿಚಾರಸಂಕಿರಣ - ದೇಶದ 20 ರಾಜ್ಯಗಳಿಂದ ಪಾಲ್ಗೊಂಡ 561 ಪ್ರತಿನಿಧಿಗಳಿಂದ ಚಳುವಳಿಯ ಅನುಭವಗಳ ಮಥನ, ಸ್ಫೂರ್ತಿಯುತ ಸಮ್ಮೇಳನದ ವರದಿ ಇಲ್ಲಿದೆ.

ಅಂಗನವಾಡಿ ನೌಕರರ ಸಮ್ಮೇಳನ

ಪ್ರಸಕ್ತ ಜಾಗತೀಕರಣ ಉದಾರೀಕರಣ ಮತ್ತು ಖಾಸಗೀಕರಣ(ಎಲ್‌ಪಿಜಿ) ನೀತಿಗಳನ್ನು ಬಲಿಷ್ಠ ಕಾರ್ಮಿಕ ಚಳುವಳಿ ಮಾತ್ರ ಹಿಮ್ಮೆಟ್ಟಿಸಲಿದ್ದು ಕಾರ್ಮಿಕರು ಮತ್ತು ದುಡಿಯುವ ವರ್ಗವನ್ನು ರಕ್ಷಿಸಲಿದೆ ಎಂದು ಸಿಐಟಿಯು ರಾಜ್ಯಾಧ್ಯಕ್ಷರಾದ ಕಾಂ.ವಿ.ಜೆ.ಕೆ. ನಾಯರ್ ಪ್ರತಿಪಾದಿಸಿದರು.

ಭಾರತದ ಕಾರ್ಮಿಕ ವರ್ಗವನ್ನು ಶೋಷಿಸಲು ಬಹುರಾಷ್ಟ್ರೀಯ ಕಂಪೆನಿಗಳು ಉತ್ಸುಕವಾಗಿವೆ. ಸ್ವಯಂ ಸೇವಾ ಸಂಸ್ಥೆಗಳು, ಸ್ವಸಹಾಯ ಸಂಘಗಳನ್ನು ಸ್ಥಾಪಿಸಿ ಅದರ ಮೂಲಕ ಕಾರ್ಮಿಕರನ್ನು ಶೋಷಣೆಗೊಳಪಡಿಸಲು ಸಂಚುರೂಪಿಸಿದೆ ಎಂದು ವಿವರಿಸಿದರು.

ಮಂಗಳವಾರ 8.11.05 ರಂದು ಉದ್ಯಾನ ನಗರಿ ಬೆಂಗಳೂರಿನ ಸುಶೀಲಾಗೋಪಾಲನ್ ನಗರ(ಟೌನ್ ಹಾಲ್)ನಲ್ಲಿ ಅಂಗನವಾಡಿ ನೌಕರರ ಅಖಿಲ ಭಾರತ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಎಲ್‌ಪಿಜಿ ಯ ಪ್ರಸ್ತುತ ಸನ್ನಿವೇಶದಲ್ಲಿ ಕಾರ್ಮಿಕರು ತೀವ್ರವಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇವುಗಳನ್ನು ಹಿಮ್ಮೆಟ್ಟಿಸುವ ಮೂಲಕ ಮಾತ್ರ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯ ಎಂದು ತಿಳಿಸಿದರು.

ಕಳೆದ ಸೆ.29ರ ಅಖಿಲ ಭಾರತ ಮುಷ್ಕರ ಈ ನೀತಿಗಳಿಗೆ ಸ್ವಲ್ಪ ಮಟ್ಟಿಗೆ ತಡೆಯೊಡ್ಡಿದೆ. ಮುಷ್ಕರದ ಅಭೂತಪೂರ್ವ ಯಶಸ್ಸಿನ ನಂತರ ನಾವೆಲ್ಲಾ ಇಲ್ಲಿ ಸಮಾವೇಶಗೊಂಡಿದ್ದೇವೆ.

ಎಲ್ಪಿಜಿ ಪ್ರಕ್ರಿಯೆಯು ದುಡಿಯುವ ಜನತೆಯ ಬದುಕಿಗೆ ಆತಂಕವನ್ನು ಉಂಟು ಮಾಡಿದೆ. ಸರ್ಕಾರಿ ಇಲಾಖೆಗಳನ್ನು ಖಾಸಗೀಕರಣಗೊಳಿಸುತ್ತಿರುವುದರಿಂದ ಕಾರ್ಮಿಕರು ಅನಿವಾರ್ಯವಾಗಿ ಸಂಘಟಿತರಾಗಬೇಕಾದ ಒತ್ತಡಕ್ಕೆ ಸಿಲುಕಿದ್ದಾರೆ ಎಂದು ವಿಜೆಕೆ ನಾಯರ್ ಹೇಳಿದರು.

ಎಲ್‌ಪಿಜಿ ಪ್ರಕ್ರಿಯೆಯು ಪ್ರತಿಯೊಂದು ಕ್ಷೇತ್ರವನ್ನೂ ಸ್ವಯಂ ಸೇವಾ ಕ್ಷೇತ್ರವನ್ನಾಗಿ ಮಾರ್ಪಡಿಸುತ್ತಿದೆ. ನಿಮ್ಮನ್ನು ನೌಕರರು ಕಾರ್ಮಿಕರಂತೆ ಪರಿಗಣಿಸದೆ ಸ್ವಯಂ ಸೇವಕರಂತೆ ನೋಡಲಾಗುತ್ತಿದೆ. ಇತ್ತೀಚೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಲವಾರು ಯೋಜನೆಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಂತಹ ಇತರೆ ಯೋಜನೆಗಳನ್ನು ಸ್ವಸಹಾಯ ಸಂಘಗಳು, ಸ್ತ್ರೀಶಕ್ತಿ ಸಂಘಗಳ ಮೂಲಕ ಜಾರಿಗೊಳಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳು ಈ ಸ್ವಯಂ ಸೇವಾ ಸಂಸ್ಥೆಗಳನ್ನು ತಮ್ಮ ಲಾಭದಾಯಕ ಕೇಂದ್ರಗಳನ್ನಾಗಿ ಮಾರ್ಪಡಿಸಲಿವೆ ಎಂದು ವಿಜೆಕೆ ಆತಂಕ ವ್ಯಕ್ತಪಡಿಸಿದರು.

ಎಂಎನ್‌ಸಿಗಳು ಅತ್ಯಂತ ಸುಲಭವಾಗಿ ಕಡಿಮೆ ವೆಚ್ಚದಲ್ಲಿ ತಮ್ಮ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಲಿವೆ. ಐಟಿಸಿ, ಹಿಂದೂಸ್ತಾನ್ ಲಿವರ್ ಲಿಮಿಟೆಡ್ ನಂತಹ ಬೃಹತ್ ಕಂಪೆನಿಗಳು ಗ್ರಾಮೀಣ ಪ್ರದೇಶದಲ್ಲಿ ತಮ್ಮ ಜಾಲವನ್ನು ವಿಸ್ತರಿಸಲು ಹವಣಿಸುತ್ತಿದ್ದು ಅಂಗನವಾಡಿ ನೌಕರರು ಈ ಕಾರ್ಯ ಚಟುವಟಿಕೆಗಳ ಕೇಂದ್ರ ಬಿಂದುವಾಗಿದ್ದೀರ ಎಂದು ಎಚ್ಚರಿಸಿದರು.

ಉದಾರೀಕರಣ ನೀತಿಗಳು ಕಾರ್ಮಿಕ ಕಾನೂನಿನ ಮೇಲೆ ತೀವ್ರ ಒತ್ತಡವನ್ನು ಹೇರಿವೆ. ವಿಶ್ವಬ್ಯಾಂಕ್, ಐಎಂಎಫ್ ನೀತಿಗಳು ಈಗಿರುವ ಕಾರ್ಮಿಕ ರಕ್ಷಣಾ ಕಾನೂನಿನ ಮೇಲೆ ಮಾರಕ ಪರಿಣಾಮಗಳನ್ನು ಬೀರುತ್ತಿವೆ. ಅಪಾರ ಸಂಖ್ಯೆಯ ಕಾರ್ಮಿಕರನ್ನು ಅತಂತ್ರ ಸ್ಥಿತಿಗೆ ದೂಡುತ್ತಿದೆ.

ಸ್ವತಂತ್ರ ಪೂರ್ವದಲ್ಲಿ ರಚಿಸಿದ ಭಾರತದಲ್ಲಿನ ಕಾರ್ಮಿಕ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿದರೆ ಕಾರ್ಮಿಕರಿಗೆ ನೆರವಾಗಲಿದೆ. ಇದಕ್ಕಾಗಿ ಕಾರ್ಮಿಕರು ಸ್ವಾತಂತ್ರ ಪೂರ್ವದಿಂದಲೂ ಬಲಿಷ್ಠ ಹೋರಾಟಗಳನ್ನು ನಡೆಸುತ್ತಾ ಬಂದಿದ್ದಾರೆ.

ಕಾರ್ಮಿಕ ಚಳುವಳಿಯಿಂದ ಮಾತ್ರ ಕಾರ್ಮಿಕ ಕಾನೂನುಗಳನ್ನು ಸಮರ್ಪಕವಾಗಿ ಜಾರಿಗೊಳಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಎಲ್‌ಪಿಜಿ ನೀತಿಗಳನ್ನು ತಡೆಯುವುದು ಮಾತ್ರವಲ್ಲ ದುಡಿಯುವ ಜನತೆಯ ಪರವಾದ ಹೊಸ ಜಗತ್ತನ್ನು ರೂಪಿಸುವುದು ಚಳುವಳಿಯಿಂದ ಮಾತ್ರ ಸಾಧ್ಯ. ಈ ನಿಟ್ಟಿನಲ್ಲಿ ಪ್ರಗತಿಯನ್ನು ಸಾಧಿಸಬೇಕಾಗಿದೆ ಎಂದು ವಿಜೆಕೆ ಕರೆ ನೀಡಿದರು.

ಅಖಿಲ ಭಾರತ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಘದ ಅಧ್ಯಕ್ಷರಾದ ನೀಲಿಮಾ ಮೈತ್ರಾ ಮಾತನಾಡುತ್ತಾ ಎಲ್‌ಪಿಜಿ ನೀತಿಗಳಿಂದಾಗಿ ದೇಶದೇಶಗಳ ನಡುವೆ ಅಸಮಾನತೆ ಸೃಷ್ಟಿಯಾಗಿದೆ. ಜಗತ್ತಿನ 500 ಮಂದಿ ಶ್ರೀಮಂತರ ಆದಾಯವು 4.16 ಕೋಟಿ ಜನತೆಯ ಆದಾಯಕ್ಕಿಂತಲೂ ಅಧಿಕವಾಗಿದೆ. ಜಗತ್ತಿನ ಕೇವಲ ಮೂರು ಮಂದಿಯ ಸಂಪತ್ತು 48ಬಡ ದೇಶಗಳ ಒಟ್ಟು ಜಿಡಿಪಿ(ಒಟ್ಟು ಆಂತರಿಕ ಉತ್ಪನ್ನ)ಗಿಂತಲೂ ಅಧಿಕವಾಗಿದೆ ಎಂದು ತಿಳಿಸಿದರು.

ಅಮೆರಿಕನ್ ಸಾಮ್ರಾಜ್ಯಶಾಹಿಯು ಜಗತ್ತಿನ ಮೇಲೆ ಆರ್ಥಿಕ ಮತ್ತು ಸೇನಾ ಹಿಡಿತವನ್ನು ಸ್ಥಾಪಿಸಲು ಸೆ.11ರ ತನ್ನ ವಿರುದ್ಧ ನಡೆದ ದಾಳಿಯನ್ನು ನೆಪ ಮಾಡಿ ಕೊಂಡು ತನ್ನ ಕಬಂಧ ಬಾಹುಗಳನ್ನು ಚಾಚಿದೆ. ಸಮೂಹ ನಾಶ ಅಸ್ತ್ರಗಳನ್ನು ಹೊಂದಿದೆ ಎಂದು ಆರೋಪ ಹೊರಿಸಿ ಇರಾಕ್ ಮೇಲೆ ದಾಳಿ ನಡೆಸಿ ಅಲ್ಲಿನ ತೈಲ ಸಂಪನ್ಮೂಲದ ಮೇಲೆ ತನ್ನ ಪ್ರಾಬಲ್ಯ ಸ್ಥಾಪಿಸಿತು ಎಂದು ಹೇಳಿದರು.



ಜಗತ್ತಿನ ಮೇಲೆ ಪ್ರಾಬಲ್ಯವನ್ನು ಸ್ಥಾಪಿಸಲು ಐಎಂಎಫ್, ವಿಶ್ವಬ್ಯಾಂಕ್ ನೀತಿಗಳೊಂದಿಗೆ ತನ್ನ ಸೇನಾಬಲವನ್ನು ಬಳಕೆ ಮಾಡಿಕೊಳ್ಳುತ್ತಿದೆ. ಇರಾನ್‌ನಲ್ಲಿನ ತೈಲ ಸಂಪನ್ಮೂಲದ ಮೇಲೆ ತನ್ನ ಸ್ವಾಮ್ಯ ಸಾಧಿಸಲು ಈಗಾಗಲೇ ಸಂಚನ್ನು ರೂಪಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಮೆರಿಕ ಮತ್ತು ಪಾಶ್ಚಿಮಾತ್ಯ ದೇಶಗಳ ಒತ್ತಡಕ್ಕೆ ಮಣಿದ ಭಾರತ ಐಎಇಎ (ಅಂತರರಾಷ್ಟ್ರೀಯ ಅಣು ಶಕ್ತಿ ಸಂಸ್ಥೆ) ನಿರ್ಣಯದಲ್ಲಿ ಇರಾನ್ ವಿರುದ್ಧ ಮತ ಚಲಾಯಿಸಿತು. ಇದರಿಂದ ಭಾರತ ಅಮೆರಿಕದ ನಿಕಟ ಮೈತ್ರಿ ರಾಷ್ಟ್ರ ಎಂಬುದು ಸಾಬೀತಾಯಿತು ಎಂದು ಮೈತ್ರಾ ತಿಳಿಸಿದರು.



ಬಲಿಷ್ಠ ಶಕ್ತಿಯಾಗಿ ಬೆಳೆಯುತ್ತಿರುವ ಚೀನಾದಿಂದ ಅಮೆರಿಕ ಆತಂಕಗೊಂಡಿದ್ದು ಅದರ ವಿರುದ್ಧ ಪಿತೂರಿ ನಡೆಸಿದೆ. ಕ್ಯೂಬಾ ಮತ್ತು ವೆನಿಜುವೆಲಾ ವಿರುದ್ಧ ತನ್ನ ಶತ್ರುತ್ವವನ್ನು ಮುಂದುವರಿಸಿದೆ ಎಂದು ಮೈತ್ರಾ ಅವರು ಆಕ್ರೋಶ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಸಾಮ್ರಾಜ್ಯಶಾಹಿ ಅತಿಕ್ರಮಣ ನೀತಿಗಳ ವಿರುದ್ಧ ಜಗತ್ತಿನಾದ್ಯಂತ ವ್ಯಾಪಕ ಪ್ರತಿಭಟನೆ ವ್ಯಕ್ತವಾಗಿದೆ. ಲ್ಯಾಟಿನ್ ಅಮೆರಿಕ ಸೇರಿದಂತೆ ಜಗತ್ತಿನಾದ್ಯಂತ ಲಕ್ಷಾಂತರ ಜನ ಪ್ರತಿಭಟನೆ ಗಳಲ್ಲಿ ಭಾಗವಹಿಸಿದ್ದಾರೆ. ನಿವೃತ್ತಿ ವೇತನ, ವೈದ್ಯಕೀಯ ಸೌಲಭ್ಯಗಳು ಸೇರಿದಂತೆ ಸಮಾಜಸೇವಾ ಯೋಜನೆಗಳಿಗೆ ಸಹಾಯಧನ ಕಡಿತ ವಿರೋಧಿಸಿ ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಇಟಲಿ, ಪೋರ್ಚುಗಲ್, ಗ್ರೀಸ್, ಹಂಗರಿ, ಅಮೆರಿಕದಂತಹ ದೇಶಗಳಲ್ಲೂ ಹೋರಾಟಗಳನ್ನು ನಡೆಸಿದ್ದಾರೆ ಎಂದು ವಿವರಿಸಿದರು.



ವಿಶ್ವದಲ್ಲಿನ ವ್ಯತಿರಿಕ್ತ ಬೆಳವಣಿಗೆಯ ನಡುವೆಯೂ ಚೀನಾ, ವಿಯೆಟ್ನಾಂ, ಉತ್ತರಕೊರಿಯಾ, ಕ್ಯೂಬಾಗಳು ಸಮಾಜವಾದಿ ವ್ಯವಸ್ಥೆಯನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿವೆ. ಜನತೆಯ ಜೀವನ ಮಟ್ಟವನ್ನು ಉನ್ನತ ಮಟ್ಟಕ್ಕೇರಿಸಲು ಸತತವಾಗಿ ಪ್ರಯತ್ನಿಸುತ್ತಿವೆ.

ಕಳೆದ ಚುನಾವಣೆಯಲ್ಲಿ ಜನತೆಯಿಂದ ತಿರಸ್ಕೃತಗೊಂಡ ಎನ್‌ಡಿಎ ಸರ್ಕಾರದ ನೀತಿಗಳನ್ನೇ ಯುಪಿಎ ಸರ್ಕಾರ ಮುಂದುವರಿಸಿದ್ದು ಇದರ ವಿರುದ್ಧ ಕಳೆದ ಸೆ.29ರಂದು ಯಶಸ್ವಿ ಮುಷ್ಕರ ನಡೆಸಲಾಗಿದೆ ಎಂದು ಮೈತ್ರಾ ತಿಳಿಸಿದರು.

ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿನ ಅಂಶಗಳನ್ನು ಯುಪಿಎ ಸರ್ಕಾರ ಜಾರಿಗೊಳಿಸದಿದ್ದರೆ ಮುಂದಿನ ದಿನಗಳಲ್ಲಿ ಪ್ರತಿಭಟನೆ ಮತ್ತು ಹೋರಾಟಗಳನ್ನು ಅಧಿಕಗೊಳಿಸಬೇಕಾಗುತ್ತದೆ. ನಮ್ಮ ಮುಂದಿರುವ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಬೇಕೆಂದು ಮೈತ್ರಾ ಕರೆ ನೀಡಿದರು.

ಅಂಗನವಾಡಿಗಳು ಪೂರ್ವ ಪ್ರಾಥಮಿಕ ಶಾಲೆಗಳಾಗಲಿ

ಐಸಿಡಿಎಸ್ ಯೋಜನೆಯನ್ನು ಪೂರ್ವ ಪ್ರಾಥಮಿಕ ಶಿಕ್ಷಣದ ಭಾಗವಾಗಿ ಪರಿಗಣಿಸಿ ಶೈಕ್ಷಣಿಕ ಸ್ಥಾನಮಾನ ಕಲ್ಪಿಸಲು ಅವಿರತ ಹೋರಾಟ ನಡೆಸಬೇಕೆಂದು ಖ್ಯಾತ ಪ್ರಗತಿಪರ ಸಾಹಿತಿಗಳು ಸ್ವಾಗತ ಸಮಿತಿ ಗೌರವಾಧ್ಯಕ್ಷರು ಆದ ಬರಗೂರು ರಾಮಚಂದ್ರಪ್ಪ ಕರೆ ನೀಡಿದರು.

ಅಖಿಲ ಭಾರತ 5ನೇ ಸಮ್ಮೇಳನಕ್ಕೆ ಸ್ವಾಗತವನ್ನು ಬಯಸಿದ ಅವರು ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಲಭಿಸಿದಾಗ ಮಾತ್ರ ಪ್ರಜಾಪ್ರಭುತ್ವಕ್ಕೆ ಅರ್ಥ ಬರಲಿದೆ ಎಂದು ಪ್ರತಿಪಾದಿಸಿದರು.

ದೇಶದ ಸುಮಾರು 6 ಲಕ್ಷ ಅಂಗನವಾಡಿ ಕೇಂದ್ರಗಳಲ್ಲಿ ಸುಮಾರು 5.38 ಕೋಟಿ ಮಕ್ಕಳು ಅಕ್ಷರ ಕಲಿಯುತ್ತಿದ್ದಾರೆ. ಮಾತ್ರವಲ್ಲ ಗರ್ಭಿಣಿ ಸ್ತ್ರೀಯರ, ಮಹಿಳೆಯರ ಆರೈಕೆಯನ್ನೂ ಅಂಗನವಾಡಿ ಕಾರ್ಯಕರ್ತೆಯರು ಮಾಡುತ್ತಿದ್ದಾರೆಂದು ತಿಳಿಸಿದರು.

ಸರ್ಕಾರಗಳು ಜಾರಿಗೊಳಿಸುವ ಎಲ್ಲ ಯೋಜನೆಗಳಲ್ಲಿ ಅಂಗನವಾಡಿ ನೌಕರರನ್ನು ಬಿಟ್ಟಿಯಾಗಿ ದುಡಿಸಿಕೊಳ್ಳುತ್ತಿರುವುದು ಪ್ರಜಾಪ್ರಭುತ್ವದ ಅಣಕ ಮತ್ತು ಸರ್ಕಾರದ ವ್ಯಂಗ್ಯ ಎಂದರು.

ಅಂಗನವಾಡಿ ಕೇಂದ್ರಗಳು ಕೇವಲ ಶಿಶುವಿಹಾರ ಕೇಂದ್ರಗಳಲ್ಲ ಅವುಗಳನ್ನು ಬಹುಮುಖೀ ಶೈಕ್ಷಣಿಕ, ಸಾಂಸ್ಕೃತಿಕ ಆಯಾಮದಲ್ಲಿ ಪರಿಶೀಲಿಸಬೇಕೆಂದು ಅಭಿಪ್ರಾಯಪಟ್ಟರು.

ಜಾಗತೀಕರಣದ ಹಿನ್ನೆಲೆಯಲ್ಲಿ ಸಮಾಜ, ಸಂಸ್ಕೃತಿ ಆತಂಕಕ್ಕೆ ಸಿಲುಕಿದ್ದು ಈ ಕುರಿತು ಅರಿವು ಅಗತ್ಯ ಎಂದು ರಾಮಚಂದ್ರಪ್ಪ ಕಿವಿಮಾತು ಹೇಳಿದರು.

ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಕಲ್ಪಿಸಲು ರಾಷ್ಟ್ರಾದ್ಯಂತ ಸಮರಧೀರ ಹೋರಾಟಗಳನ್ನು ನಡೆಸಬೇಕೆಂದು ಕರೆ ನೀಡಿದರು.

ಕಾಂ.ಕೆ.ಎಸ್.ಲಕ್ಷ್ಮೀ ಮತ್ತು ಸಂಗಡಿಗರು ಹಾಡಿದ ಸಮಾನತೆಯ ಗುರಿಯನ್ನು ಹೊಂದಿರುವ ಕುವೆಂಪು ಅವರ ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಗೀತೆ ಸಂಗಾತಿಗಳಲ್ಲಿ ರೋಮಾಂಚನ ಉಂಟು ಮಾಡಿದ್ದಲ್ಲದೆ ಪುಳಕಿತಗೊಳಿಸಿತು.



ಬೆಂಗಳೂರಿನಲ್ಲಿ ಅಂಗನವಾಡಿ ನೌಕರರ

ಬೆಂಗಳೂರು ನಗರಕ್ಕೆ ಅಂಗನವಾಡಿ ನೌಕರರ ರ‍್ಯಾಲಿಗಳು ಹೊಸದೇನಲ್ಲ. ಬಹಳಷ್ಟು ನಡೆಯುತ್ತವೆ. ಆದರೆ ನವೆಂಬರ್ 8, 2005ರಂದು ಬೆಂಗಳೂರು ನಗರದಲ್ಲಿ ನಡೆದ ಅಂಗನವಾಡಿ ನೌಕರರ ರ‍್ಯಾಲಿ ಅಕ್ಷರಶಃ ಅಭೂತಪೂರ್ವವಾದದ್ದು, ಅಪೂರ್ವವಾದದ್ದು. ಸಾವಿರ ಸಾವಿರ ಸಂಖ್ಯೆಯಲ್ಲಿ 'ಇರುವೆಯಂತೆ ಹರಿವ ಸಾಲು, ಹುಲಿ ಸಿಂಹದ ದನಿಗಳು' ಎಂಬ ಗೀತೆಯನ್ನು ನೆನಪಿಸುವಂತೆ ಬಹುತೇಕ ಕೆಂಪು ಸೀರೆ ಕೆಂಪು ರವಿಕೆ ತೊಟ್ಟು ಶಿಸ್ತಿನ ಹೆಜ್ಜೆ ಇಟ್ಟ ಅಪಾರ ಸಂಖ್ಯೆಯ ಅಂಗನವಾಡಿ ನೌಕರರನ್ನು ಕಂಡ ಬೆಂಗಳೂರಿನ ಜನತೆಯಲ್ಲಿ ಅಚ್ಚರಿ ಮೂಡಿಸಿದಂತಹ ಮೆರವಣಿಗೆ ಅದು. ನಗರದ ರೈಲು ನಿಲ್ದಾಣದ ಆವರಣದಿಂದ ತಂಡೋಪತಂಡವಾಗಿ ಹೊರಟ ಮೆರವಣಿಗೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು - ಸಹಾಯಕಿಯರು ತಮ್ಮ ಬದುಕಿನ ಜ್ವಲಂತ ಸಮಸ್ಯೆಗಳ ವಿರುದ್ಧ - ಸರ್ಕಾರಗಳ ಹೊಣೆಗೇಡಿತನದ ವಿರುದ್ಧ ಘೋಷಣೆಗಳನ್ನು ಕೂಗಿದರು. ಅವು ಕೇವಲ ತಮ್ಮ ಸಂಬಳ ಸವಲತ್ತುಗಳಿಗೆ ಸಂಬಂಧಪಟ್ಟ ಘೋಷಣೆಗಳಲ್ಲ. ನಾವು ಸಹ ಇತರರೆಲ್ಲರಂತೆ ಮನುಷ್ಯರು. ನಮ್ಮನ್ನೂ ಸಹ ಮನುಷ್ಯರಂತೆ ಕಾಣಿ ಎಂಬ ಅಂಗನವಾಡಿ ನೌಕರರ ಒಡಲಾಳದ ಆಗ್ರಹ ಅದು. ಮೆರವಣಿಗೆಯು ಮಧ್ಯಾಹ್ನ 3.00 ಕ್ಕೆ ಮಲ್ಲೇಶ್ವರಂ ಮೈದಾನವನ್ನು ತಲುಪುತ್ತಿದ್ದಂತೆ ಅಂಗನವಾಡಿ ಕಾರ್ಯಕರ್ತೆಯರ ಸಾಂಸ್ಕೃತಿಕ ತಂಡದಿಂದ ಕ್ರಾಂತಿಗೀತೆಗಳ ಸ್ವಾಗತ. 'ಅಂಗನವಾಡಿ ಅಕ್ಕ...' ಮುಂತಾದ ಹೋರಾಟದ ಹಾಡುಗಳು. ಕಪ್ಪಾನೆ ಮೋಡ ಮುಸುಕಿದ - ಚುಮು ಚುಮು ಚಳಿಯ ವಾತಾವರಣದಲ್ಲಿ ಮಲ್ಲೇಶ್ವರಂ ಮೈದಾನದಲ್ಲಿ 'ಕೆಂಪು ಸಮುದ್ರ'ದಂತೆ ಕಾರ್ಯಕರ್ತರು ಭರ್ತಿಯಾದ ಮೇಲೆ ವೇದಿಕೆಯ ಮೇಲೆ ಅವರು ಕಂಡದ್ದು ಸಹ ಮತ್ತೊಂದು ಅಪೂರ್ವ ದೃಶ್ಯ. ಕರ್ನಾಟಕ ಜಾನಪದ ನೃತ್ಯ ಪ್ರಕಾರಗಳಲ್ಲೊಂದಾದ ಡೊಳ್ಳು ಕುಣಿತ. ಸಾಮಾನ್ಯವಾಗಿ ಡೊಳ್ಳು ಕುಣಿತ ಗಂಡಸರಿಗೆ ಮೀಸಲು. ಬಹುಭಾರದ ದೊಡ್ಡ 'ಡೊಳ್ಳು'ಗಳನ್ನು ಕೊರಳಿಗೆ ನೇತು ಹಾಕಿಕೊಂಡು ಲಯಬದ್ಧವಾಗಿ ಕುಣಿಯುವುದು - ನೆಗೆಯುವುದು ಮಹಿಳೆಯರಿಗೆ ಆಗದು ಎಂದೇ ಭಾವಿಸಲಾಗುತ್ತದೆ. ಆ ಎಲ್ಲ ಅನಿಸಿಕೆಗಳನ್ನು ನುಚ್ಚು ನೂರು ಮಾಡಿ ವೇದಿಕೆಯ ಮೇಲೆ ಅರ್ಧ ಗಂಟೆಗೂ ಹೆಚ್ಚು ಕಾಲ ಅತ್ಯಂತ ಆಕರ್ಷಕವಾಗಿ ಡೊಳ್ಳು ಕುಣಿತ ಪ್ರದರ್ಶನ ಕೊಟ್ಟಿದ್ದು ಶಿವಮೊಗ್ಗದ ಮೈತ್ರಿ ಮಹಿಳಾ ಮಂಡಳಿಯ ಸದಸ್ಯರು. ಇವರ ಸಾಹಸಮಯ ಆಕರ್ಷಕ ಕಲಾತ್ಮಕ ಡೊಳ್ಳು ಕುಣಿತ ನೆರೆದಿದ್ದ ಮಹಿಳೆಯರಲ್ಲಿ 'ಪುರುಷರಿಗಿಂತ ನಾವೇನು ಕಮ್ಮಿ' ಎಂಬ ಆತ್ಮವಿಶ್ವಾಸ - ಹೆಮ್ಮೆಯನ್ನು ಮೂಡಿಸಿದ್ದರೆ, ಡೊಳ್ಳು ಹೊತ್ತು ಕುಣಿದವರಿಗೆ ಸಮಾಜದ ಪರಂಪರಾಗತ ಹುಸಿ ನಂಬಿಕೆಯೊಂದನ್ನು ಸಹಸ್ರಾರು ಜನರೆದುರು ಪುಡಿಗುಟ್ಟಿದ ಸಂಭ್ರಮ.

ಅಂಗನವಾಡಿ ನೌಕರರ ಸಂಘಟನೆಯ ಅಖಿಲ ಭಾರತ ಅಧ್ಯಕ್ಷೆ ಕಾಂ. ನೀಲಿಮಾ ಮೈತ್ರಾರವರ ಅಧ್ಯಕ್ಷತೆಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ಎಸ್.ವರಲಕ್ಷ್ಮಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಭಾರತ ದೇಶವು ಮಾನವ ಅಭಿವೃದ್ಧಿ ಸಾಧನೆಯಲ್ಲಿ 121 ರಿಂದ 127ನೇ ಸ್ಥಾನಕ್ಕೆ ಕುಸಿದಿದೆ.



ಇಂತಹ ಗಂಭೀರ ಸ್ಥಿತಿಯಲ್ಲಿ ಮಾನವ ಅಭಿವೃದ್ಧಿಯನ್ನು ಸಾಧಿಸುವ ನಿಟ್ಟಿನಲ್ಲಿ ಅಂಗನವಾಡಿಗಳ ಪಾತ್ರ ಅತ್ಯಂತ ಗಮನಾರ್ಹ. ಕಳೆದ 30 ವರ್ಷಗಳಿಂದ ಇವರು ನಿರಂತರ ಚಳುವಳಿ ನಡೆಸುತ್ತಿದ್ದರೂ ಇವರನ್ನು ಬರೀ ಗೌರವಧನದ ಆಧಾರದಲ್ಲಿ ದುಡಿಸಿಕೊಳ್ಳಲಾಗುತ್ತಿದೆ. ಭತ್ಯೆ ನೀಡುತ್ತಿಲ್ಲ. 500 ರೂ.ಗಳಿಂದ ಗೌರವಧನವನ್ನು 1000 ರೂ.ಗಳಿಗೆ ಏರಿಸಲು ಅಂಗನವಾಡಿ ನೌಕರರು ನಡೆಸಿರುವ ಹೋರಾಟ ಅತ್ಯಂತ ಸುದೀರ್ಘ. ಇಂದು ಸಿಐಟಿಯು ಸಂಘಟನೆ ಅಂಗನವಾಡಿ ಕಾರ್ಯಕರ್ತೆಯರು - ಸಹಾಯಕಿಯರ ನಿವೃತ್ತಿ ವೇತನದ ಬೇಡಿಕೆಯನ್ನು ಎತ್ತಿದ್ದು, ಬೇಡಿಕೆಯ ಸ್ವರೂಪ ಅಖಿಲ ಭಾರತದ್ದಾದ್ದರಿಂದ ಚಳುವಳಿಯೂ ಅಖಿಲ ಭಾರತದ ಸ್ವರೂಪದ್ದಾಗಬೇಕು. ಕೇವಲ ಸಿಐಟಿಯುನಿಂದ ಮಾತ್ರ ಇಂತಹ ಚಳುವಳಿಗೆ ನೇತೃತ್ವ ನೀಡಲು ಸಾಧ್ಯ ಎಂದ ವರಲಕ್ಷ್ಮಿಯವರು ಅಂತರ ರಾಷ್ಟ್ರೀಯವಾಗಿ ಗಮನ ಸೆಳೆದಿರುವ ಬೆಂಗಳೂರಿನಲ್ಲಿ ಈ ಸಮ್ಮೇಳನ ನಡೆಯುತ್ತಿದ್ದು, ಈ ಎಲ್ಲ ಪ್ರಶ್ನೆಗಳ ಬಗೆಗೆ ಚರ್ಚಿಸಲಿದೆ. ಅದೂ ಅಲ್ಲದೆ ಈ ಬೃಹತ್ ರ‍್ಯಾಲಿ ಮತ್ತು ಸಮ್ಮೇಳನ ಅಂಗನವಾಡಿ ನೌಕರರಿಗೆ ಕಿರುಕುಳ ನೀಡುವ ಜನರಿಗೆ ಒಂದು ದೊಡ್ಡ ಎಚ್ಚರಿಕೆ ಎಂದು ಗುಡುಗಿದರು. ಕಾಕತಾಳೀಯವೊ ಎಂಬಂತೆ ಬಾನಂಗಳದಲ್ಲಿ ಮಾರ್ದನಿಯೆಂಬಂತೆ ಪ್ರಕೃತಿಯ ಗುಡುಗುಡು ಗುಡುಗಿತು.

ನಂತರ ಮಾತನಾಡಿದ್ದು ಬಹಿರಂಗ ಸಭೆಯ ಅಧ್ಯಕ್ಷರು. ಕಾಂ. ನೀಲಿಮಾ ಮೈತ್ರಾ. ಈ ಹಿಂದೆ ನಡೆದ ನಾಲ್ಕೂ ಸಮ್ಮೇಳನಗಳಿಗೆ ಹೋಲಿಸಿದರೆ ಇದು ಅತ್ಯಂತ ದೊಡ್ಡ ಸಂಖ್ಯೆಯ ಜನರು ಸೇರಿದ ರ‍್ಯಾಲಿ ಎಂದು ಸಂತೋಷದಿಂದ ಅಭಿನಂದಿಸಿದ ಅವರು ಅಂಗನವಾಡಿ ಕಾರ್ಯಕರ್ತೆಯರು ಸಹಾಯಕರು ತಮಗೆ ಸಿಗುವ ಅತ್ಯಲ್ಪ ಗೌರವಧನದಲ್ಲಿ ಸಹ ಈ ಸಮ್ಮೇಳನ ಯಶಸ್ವಿಗಾಗಿ ಒಂದು ಪಾಲು ನೀಡುವ ಮೂಲಕ ದೊಡ್ಡ ಪ್ರಮಾಣದಲ್ಲಿ ಹಣವನ್ನು ಸಂಗ್ರಹಿಸಿಕೊಟ್ಟಿದ್ದಾರೆ ಎಂದು ಅಭಿನಂದಿಸಿದರು.

ದೇಶದಲ್ಲಿ ಅಂಗನವಾಡಿಗಳು ಆರಂಭವಾಗಿ 32 ವರ್ಷಗಳಾಗಿವೆ. ಕನಿಷ್ಟ ಒಂದು ಸಾವಿರ ಜನಸಂಖ್ಯೆಗೆ ಒಂದರಂತೆ ಅಂಗನವಾಡಿ ಕೇಂದ್ರಗಳನ್ನು ತೆರೆಯಬೇಕೆಂಬ ಸುಪ್ರೀಂ ಕೋರ್ಟಿನ ನಿರ್ದೇಶನದಂತೆ ಈಗ ಅಂಗನವಾಡಿ ಕೇಂದ್ರಗಳನ್ನು ಇನ್ನಷ್ಟು ತೀವ್ರವಾಗಿ ವಿಸ್ತರಿಸಬೇಕಿದೆ.

ಅಂಗನವಾಡಿ ಕಾರ್ಯಕರ್ತೆಯರ ಕೆಲಸ ಮಗುವು ಇನ್ನೂ ತಾಯಿಯ ಹೊಟ್ಟೆಯಲ್ಲಿರುವಾಗಿನಿಂದಲೇ ಆರಂಭವಾಗುತ್ತದೆ. ತಾಯಿಯ ಆರೋಗ್ಯದ ಬಗೆಗೆ ತಿಳುವಳಿಕೆ ನೀಡಿ ಜೋಪಾನ ಮಾಡುವುದು - ವೈದ್ಯರು ಮಾಡಬೇಕಾದ ಹಲವು ಜವಾಬ್ದಾರಿಯನ್ನು ಆಕೆ ನಿರ್ವಹಿಸುತ್ತಾಳೆ. ನಂತರ ಬಾಣಂತಿಯ ಆರೋಗ್ಯ. ಮಗುವಿನ ಆಟ-ಪಾಠ ಇಂತಹ ಹಲವು ಜವಾಬ್ದಾರಿಯನ್ನು ಆಕೆ ಹೊರುತ್ತಾಳೆ. ಇದು ಮಾತ್ರವಲ್ಲ ಸತಿ ಪದ್ಧತಿ ಬಾಲ್ಯ ವಿವಾಹಗಳಂತಹ ಸಾಮಾಜಿಕ ಸಮಸ್ಯೆಗಳ ಪ್ರಶ್ನೆಯಲ್ಲಿ ತಿಳುವಳಿಕೆ ನೀಡುವ ಕೆಲಸವನ್ನು ಆಕೆ ನಡೆಸುತ್ತಾಳೆ. ಇದಕ್ಕೆ ಆಕೆಗೆ ಸಿಗುವ ಬಹುಮಾನವೆಂದರೆ ಸಮಾಜದ ಪ್ರತಿಗಾಮಿ ಶಕ್ತಿಗಳಿಂದ ಹಲ್ಲೆ, ದಬ್ಬಾಳಿಕೆ.

'ಪ್ರಾಜೆಕ್ಟ್' ಯಾಕೆ - ಇಲಾಖೆ ಯಾಕಲ್ಲ?

ಮಾನವ ಸಮಾಜ ಇರುವವರೆಗೆ ಸಮಾಜದಲ್ಲಿ ತಾಯಿ ಮತ್ತು ಮಕ್ಕಳು ಇರುತ್ತಾರೆ. ಈ ತಾಯಿ - ಮಕ್ಕಳ ಕಾಳಜಿ ವಹಿಸಲು ಒಂದು ಪ್ರತ್ಯೇಕ ಇಲಾಖೆ ರೂಪಿಸಿ ಅದನ್ನು ಸಾಂಸ್ಥಿಕರಿಸಬೇಕಿದೆ. ಆದರೆ ಹಾಗೆ ಮಾಡಲು ಸಿದ್ಧವಿಲ್ಲದ ಸರಕಾರಗಳು ಇದನ್ನು 'ಪ್ರಾಜೆಕ್ಟ್' (ಯೋಜನೆ) ಎಂದು ಕರೆಯುತ್ತವೆ. ಏಕೆಂದರೆ ಈ 'ಯೋಜನೆ'ಯನ್ನು ಇಲಾಖೆ ಎಂದು ಕರೆದರೆ ಆಗ ಕಾರ್ಯಕರ್ತೆ- ಸಹಾಯಕಿಯರನ್ನು ನೌಕರರೆಂದು ಕರೆಯಬೇಕಾಗುತ್ತದೆ ಎಂದ ಮೈತ್ರಾ ಸರ್ಕಾರಗಳ ತಂತ್ರಗಾರಿಕೆಯನ್ನು ಬಯಲು ಮಾಡಿದರು. ಅಂಗನವಾಡಿಗಳ ಖಾಸಗೀಕರಣಕ್ಕೆ ಕುಮ್ಮಕ್ಕು ನೀಡಿದ ಎನ್.ಡಿ.ಎ. ಸರ್ಕಾರವನ್ನು ಸೋಲಿಸುವಲ್ಲಿ ಅಂಗನವಾಡಿ ನೌಕರರು ದೊಡ್ಡ ಪಾತ್ರವಹಿಸಿದ್ದಾರೆಂದು ಅಭಿನಂದಿಸಿದರು.

ನಂತರ ಅಂಗನವಾಡಿ ಸಂಘಟನೆಯ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಕೆ.ಹೇಮಲತಾ ಮಾತನಾಡಿ ಇಲ್ಲಿಯ ಬೃಹತ್ ರ‍್ಯಾಲಿ ಕರ್ನಾಟಕದಲ್ಲಿ ಅಂಗನವಾಡಿ ನೌಕರರ ಬೆಳವಣಿಗೆಯ ಸೂಚಕ ಎಂದರು. ಪಂಜಾಬ್ ಹರ್ಯಾಣ - ಅಸ್ಸಾಂ - ತ್ರಿಪುರ ದೇಶದ ಮೂಲೆಗಳಿಂದ ಪ್ರತಿನಿಧಿಗಳು ಈ ಸಮ್ಮೇಳನಕ್ಕೆ ಬಂದಿದ್ದಾರೆ. ಜಮ್ಮು ಕಾಶ್ಮೀರದಿಂದಲೂ ಪ್ರತಿನಿಧಿಗಳು ಬರುವವರಿದ್ದರು. ಆದರೆ ಅಲ್ಲಿ ಭಯೋತ್ಪಾದಕ ಶಕ್ತಿಗಳಿಂದ ತೊಂದರೆಯಾಗಿ ಅವರು ಇಲ್ಲಿಗೆ ಬರಲು ಆಗಿಲ್ಲ. ಆದರೆ ಅವರೂ ಕೂಡ ಚಳುವಳಿಯ ಹಾದಿಯಲ್ಲೇ ಇದ್ದಾರೆ. 4ನೇ ಅಖಿಲ ಭಾರತ ಸಮ್ಮೇಳನ ನಡೆದಾಗ ದೇಶದಲ್ಲಿ ಎನ್.ಡಿ.ಎ. ಸರ್ಕಾರ ಅಧಿಕಾರದಲ್ಲಿತ್ತು. ಅದು ಜನರನ್ನು ಜಾತಿ - ಮತಗಳ ಆಧಾರದಲ್ಲಿ ವಿಭಜಿಸುವ ಕೆಲಸ ಮಾಡಿತು. ವಿಶ್ವಬ್ಯಾಂಕ್ ನ ನಿರ್ದೇಶನದ ಆಧಾರದಲ್ಲಿ ಜಾಗತೀಕರಣ - ಉದಾರೀಕರಣ-ಖಾಸಗೀಕರಣದ ನೀತಿಗಳನ್ನು ಹೇರಿತು. ನಂತರ ಎನ್‌ಡಿಎ ಸೋತು ಕೇಂದ್ರದಲ್ಲಿ ಯುಪಿಎ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಸರ್ಕಾರದ ಸಮಾನ ಕನಿಷ್ಟ ಕಾರ್ಯಕ್ರಮ(ಸಿ.ಎಂ.ಪಿ.)ಯಲ್ಲಿ ಐ.ಸಿ.ಡಿ.ಎಸ್. ಯೋಜನೆ ವಿಸ್ತರಣೆ ಮತ್ತು ಬಲವರ್ಧನೆಯ ಭರವಸೆ ಇದೆ. ದೇಶದ ಇಂದಿನ ಅಗತ್ಯವೆಂದರೆ ಇನ್ನೂ ಕನಿಷ್ಟ 15 ಲಕ್ಷ ಅಂಗನವಾಡಿ ಕೇಂದ್ರಗಳನ್ನು ಆರಂಭಿಸಬೇಕಾಗಿದೆ. ಆದರೆ ಈಗ ಕೇವಲ 1.86 ಲಕ್ಷ ಅಂಗನವಾಡಿಗಳನ್ನು ಮಾತ್ರ ಹೊಸದಾಗಿ ಆರಂಭಿಸಲಾಗುತ್ತಿದೆ. ಇದು ಏನೂ ಸಾಲದು ಮತ್ತು ಅಂಗನವಾಡಿ ನೌಕರರ ಖಾಯಮಾತಿ ಬಗೆಗೆ ಅಂಗನವಾಡಿಗಳ ಸಾರ್ವತ್ರೀಕರಣದ ಬಗೆಗೆ ಬರೀ ಬೊಗಳೆ ಘೋಷಣೆಗಳು ಸಾಲದು. ಸಂಘಟನೆ ಸರ್ಕಾರದ ನೀತಿಯ ವಿರುದ್ಧ ದೃಢವಾದ ಹೋರಾಟ ನಡೆಸುತ್ತಿದೆ. ಪ್ರಸ್ತುತ ಪಂಜಾಬ್ ಹಿಮಾಚಲ ಪ್ರದೇಶ ಆಂಧ್ರ, ಅಸ್ಸಾಂ, ತಮಿಳುನಾಡು, ಕರ್ನಾಟಕಗಳಲ್ಲಿ ತೀವ್ರವಾದ ಚಳುವಳಿಗಳು ನಡೆಯುತ್ತಿವೆ. ಅಂಗನವಾಡಿಗಳನ್ನು ಪಂಚಾಯಿತ್ತಿಗಳ ವ್ಯಾಪ್ತಿಗೆ ನೀಡುವ ವಿರುದ್ಧ ಅಂಗನವಾಡಿಗಳನ್ನು ನಿರ್ಲಕ್ಷಿಸಿ ಸರ್ವಶಿಕ್ಷಣ ಅಭಿಯಾನದ ಜಾರಿ ವಿರುದ್ಧ, ಅಂಗನವಾಡಿಗಳನ್ನು ಪೂರ್ವ ಪ್ರಾಥಮಿಕ ಶಾಲೆಗಳೆಂದು ಪರಿಗಣಿಸುವಂತೆ ಒತ್ತಾಯಿಸಿ ಹಾಗೂ ಅಂಗನವಾಡಿ ಕಾರ್ಯಕರ್ತೆ-ಸಹಾಯಕಿಯರನ್ನು

